# 4:10-18

# ವಂದನೆಗಳು ಮತ್ತು ಹೇಳಿಕೆಗಳು

4:10-14ರಲ್ಲಿ ಸೇರ್ಪಡೆಗೊಳಿಸಿಲ್ಪಟ್ಟಿರುವ ಪೌಲನ ಪ್ರಯಾಣದಲ್ಲಿ ಜೊತೆಯಾಗಿರುತ್ತಿದ್ದವರಲ್ಲಿ "ಯೂಸ್ತನೆನಿಸಿಕೊಳ್ಳುವ ಯೇಸು" ಎಂಬವನನ್ನು ಹೊರತು ಪಡಿಸಿ ಮಿಕ್ಕ ಎಲ್ಲಾ ಸಂಗಡಿಗರ ಹೆಸರುಗಳು ಫಿಲೆಮೋನನಿಗೆ 23, 24ರಲ್ಲಿ ಉಲ್ಲೇಖಿಸಲ್ಪಟ್ಟಿವೆ. ಬೇರೆ ಇನ್ನೆರಡು ಪತ್ರಿಕೆಗಳಲ್ಲಿ ಮಾತ್ರವೇ ಪೌಲನು ಜನರ ದೊಡ್ಡ ಪಟ್ಟಿಯನ್ನು ಬರೆದಿರುತ್ತಾನೆ (ರೋಮಾ 16:1-23; 1 ಕೊರಿಂಥ 16:10-20). ಈ ಪತ್ರಿಕೆಗಳು ಆತನು ಯಾರಿಗೆ ವಂದನೆಗಳನ್ನು ಹೇಳಿದನೋ ಅವರ ಹೆಸರುಗಳನ್ನು ಪಟ್ಟಿ ಮಾಡಿರುತ್ತವೆ, ಆದರೆ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಆತನು ರೋಮಾಪುರದಲ್ಲಿ ತನ್ನ ಸಂಗಡ ಇದ್ದವರ ಕಡೆಯಿಂದ ಕೊಲೊಸ್ಸೆಯವರಿಗೆ ವಂದನೆಗಳನ್ನು ತಿಳಿಸುತ್ತಿದ್ದಾನೆ. ಈ ಜನರು ಆತನಿಗೆ ಉಪಚಾರ ಮಾಡುತ್ತಿದ್ದರು, ಆತನೊಂದಿಗೆ ಬೇರೆಯವರಿಗೆ ಉಪದೇಶ ಮಾಡುತ್ತಿದ್ದರು, ಮತ್ತು ಅವರು ಆತನೊಂದಿಗೆ ಸೆರೆಮನೆಯಲ್ಲಿ ಸಹ ಇದ್ದಿರಬಹುದಾಗಿದೆ. ಪೌಲನು ಪತ್ರಿಕೆಯನ್ನು ಬರೆಯುವ ವೇಳೆಯಲ್ಲಿ ಅವರು ಆತನ ಸಂಗಡ ಇದ್ದವರಾಗಿದ್ದಲ್ಲಿ, ತನ್ನ ಹೆಸರನ್ನು ಸಹ ಪೌಲನು ವಂದನೆಗಳನ್ನು ಹೇಳುವದರಲ್ಲಿ ಸೇರ್ಪಡೆಗೊಳಿಸಬೇಕೆಂದು ಬಹಳ ಉತ್ಸುಕರಾಗಿರುತ್ತಿದ್ದರೆಂಬದರಲ್ಲಿ ಯಾವ ಸಂಶಯವೂ ಇರುವದಿಲ್ಲ.

ಪೌಲನ ಆರು ಮಂದಿ ಜೊತೆ ಕೆಲಸದವರು ತಮ್ಮ ವೈಯಕ್ತಿಕ ವಂದನೆಗಳನ್ನು ತಿಳಿಸುತ್ತಾರೆ. ತಿಮೊಥೆಯವನು ಪೌಲನೊಂದಿಗೆ 1:1ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದನಾದ್ದರಿಂದ ಆತನ ಹೆಸರನ್ನು ಸೇರ್ಪಡೆಗೊಳಿಸಿರುವದಿಲ್ಲ. ಬಾರ್ನಬನ ಸೋದರ ಸಂಬಂಧಿಯಾದ ಮಾರ್ಕನ ಗುರುತನ್ನು ಪರಿಚಯಿಸುವ ವೇಳೆ 10ನೇ ವಚನವು ಬಾರ್ನಬನ ಹೆಸರನ್ನು ಉಲ್ಲೇಖಿಸುತ್ತದೆ.

ವಂದನೆಗಳನ್ನು ಹೇಳುತ್ತಾರೆಂಬದಾಗಿ ಪೌಲನು ಪ್ರಸ್ತಾಪಿಸಿದ ಮೊದಲ ಮೂರು ಸಹೋದರರು ಯೆಹೂದಿ ಹಿನ್ನಲೆಯವರಾಗಿದ್ದರು ("ಸುನ್ನತಿಯವರೊಳಗೆ"; ವ. 11). ಅವರು ಪೌಲನ ಸಂಗಡ ಪ್ರಯಾಸ ಪಡುತ್ತಿದ್ದ ಯೆಹೂದಿ ಕ್ರೈಸ್ತರಲ್ಲಿ ಈ ಮೂವರು ಮಾತ್ರವೇ ಆಗಿದ್ದರು. ಆತನ ಪಟ್ಟಿಯಲ್ಲಿ ಮುಂದೆ ಬರುವ ಮೂವರು ಜೊತೆ ಕೆಲಸದವರು ಸುನ್ನತಿಯಿಲ್ಲದವರಾಗಿದ್ದರು; ಅಂದರೆ, ಅವರು ಅನ್ಯಜನಾಂಗದ ಕ್ರೈಸ್ತರಾಗಿದ್ದರು.

ಯೆಹೂದ್ಯರು ಹಾಗೂ ಅನ್ಯಜನಾಂಗದ ಸಹೋದರರು ಕೈಜೋಡಿಸಿದ್ದಾರೆ ಮತ್ತು ಕರ್ತನಲ್ಲಿ ಜೊತೆಜೊತೆಯಾಗಿ ಪ್ರಯಾಸ ಪಡುತ್ತಿದ್ದಾರೆಂಬದಾಗಿ ಕೊಲೊಸ್ಸೆಯವರಿಗೆ ಭರವಸೆಯನ್ನು ಕೊಡುವದಕ್ಕೋಸ್ಕರ ಪೌಲನು ಜನಾಂಗಗಳ ನಡುವಿನ ಭಿನ್ನತೆಯನ್ನು ತೋರಿಸಿರಬಹುದಾಗಿದೆ. ಬಹುಶಃ ಆತನು ಕೊಲೊಸ್ಸೆಯವರಿಗೆ ಯೆಹೂದ್ಯ ಕ್ರೈಸ್ತರಿಗಿಂತ

ಹೆಚ್ಚಲ್ಲಿದ್ದಿದ್ದರೂ ಅವರಷ್ಟೇ ಆಳವಾಗಿ ಸುವಾರ್ತೆಯ ಪ್ರಸಾರಣೆಯಲ್ಲಿ ತೊಡಗಿಸಿಕೊಂಡಿರುತ್ತಾರೆಂಬದನ್ನು ತಿಳಿಯಪಡಿಸುತ್ತಿದ್ದಾನೆಂದು ತೋರುತ್ತದೆ.

ಬಹುಪಾಲು ಸುನ್ನತಿಯಿಲ್ಲದ ಸದಸ್ಯರನ್ನೊಳಗೊಂಡಿದ್ದಂಥ ಕೊಲೊಸ್ಸೆಯಲ್ಲಿದ್ದ ಸಭೆಯು, ತಮ್ಮ ಜೊತೆ ಅನ್ಯಜನರು ಯೇಸುವಿನ ಸೇವೆ ಮಾಡುತ್ತಿದ್ದಾರೆಂಬದನ್ನು ಕೇಳಿ ಉತ್ತೇಜನಗೊಳ್ಳಬಹುದಿತ್ತು. ಪೌಲನು ತನ್ನ ಸುತ್ತಲೂ ಕೇವಲ ಯೆಹೂದಿ ಕ್ರೈಸ್ತರನ್ನು ಮಾತ್ರವೇ ಇಟ್ಟುಕೊಂಡವನಾಗಿರಲಿಲ್ಲ, ಆದರೆ ಆತನು ಎಲ್ಲಾ ಕ್ರೈಸ್ತರೊಂದಿಗೆ ಕೆಲಸ ಮಾಡುತ್ತಿದ್ದನು ಮತ್ತು ಸೇರಿಸಿಕೊಳ್ಳುವವನಾಗಿದ್ದನು. ಅವರು ಒಟ್ಟಾಗಿ "ದೇವರ ರಾಜ್ಯಾಭಿವೃದ್ಧಗಾಗಿ" ಪ್ರಯಾಸ ಮಾಡುತ್ತಿದ್ದರು (4:11).

David M. Hay ಕೊಲೊಸ್ಸೆಯವರಿಗೆ ಮತ್ತು ಫಿಲೆಮೋನನಿಗೆ ಬರೆದ ಪತ್ರಿಕೆಗಳಲ್ಲಿರುವ ಕ್ರೈಸ್ತರ ಪಟ್ಟಿಗಳಲ್ಲಿನ ಸಾಮ್ಯತೆಗಳನ್ನು ಮತ್ತು ಭಿನ್ನತೆಗಳನ್ನು ಎತ್ತಿ ತೋರಿಸುತ್ತಾನೆ:

> ಹೇಳುವದಾದರೆ ಕೊಲೊಸ್ಸೆ 4, ಫಿಲೆಮೋನನಿಗೆ 23-24 ವಚನಗಳಲ್ಲಿ ಎಪಫ್ರನು, ಮಾರ್ಕ, ಅರಿಸ್ತಾರ್ಕ, ದೇಮ, ಮತ್ತು ಲೂಕ ಇವರು ವಂದನಗಳನ್ನು ಹೇಳುತ್ತಾರೆಂದು ಪಟ್ಟಿಯಿರುತ್ತದೆ (ಫಿಲೆಮೋನನಿಗೆ 2ರಲ್ಲಿ ಅರ್ಖಿಪ್ಪ ಮತ್ತು ಫಿಲೆಮೋನನಿಗೆ 10ರಲ್ಲಿ ಒನೇಸಿಮರ ಬಗ್ಗೆ ಪ್ರಸ್ತಾಪಿಸಲಾಗಿದೆ). ಇನ್ನೊಂದೆಡೆಯಲ್ಲಿ, ಫಿಲೆಮೋನನಿಗೆ ಬರೆದ ಪತ್ರಿಕೆಯು ಯೂಸ್ತನೆನಿಸಿಕೊಳ್ಳುವ ಯೇಸುವನ್ನು, ಅಥವಾ ನುಂಫಳನ್ನು ಪ್ರಸ್ತಾಪಿಸುವದಿಲ್ಲ; ಮತ್ತು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯು ಫಿಲೆಮೋನನನ್ನಾಗಲಿ ಅಥವಾ ಅಪ್ಫಿಯಳನ್ನಾಗಲಿ ಪ್ರಸ್ತಾಪಿಸುವದಿಲ್ಲ.[1]

ಹೆಸರುಗಳ ಕ್ರಮ ಸಂಖ್ಯೆಯು ಎರಡೂ ಪತ್ರಿಕೆಗಳಲ್ಲಿ ಬೇರೆ ಬೇರೆ ಆಗಿರುತ್ತದೆ. ಬಹುಶಃ ಪೌಲನು ತನ್ನ ಗ್ರಹಿಕೆಯ ಪ್ರಕಾರ ಅಥವಾ ವಾಚಕರ ದೃಷ್ಟಿಕೋನದ ಪ್ರಕಾರವಾಗಿ ಆಯಾ ವ್ಯಕ್ತಿಗಳ ಪ್ರಾಮುಖ್ಯತೆಗನುಗುಣವಾಗಿ ಪಟ್ಟಿ ಮಾಡಿರಬಹುದಾಗಿದೆ. ಫಿಲೆಮೋನನಿಗೆ 23, 24ರಲ್ಲಿ ಆತನು ಅವರನ್ನು ಈ ಮುಂದಿನಂತೆ ಪಟ್ಟಿ ಮಾಡಿರುತ್ತಾನೆ: ಎಪಫ್ರ, ಮಾರ್ಕ, ಅರಿಸ್ತಾರ್ಕ, ದೇಮ, ಮತ್ತು ಲೂಕ. ಕೊಲೊಸ್ಸೆ 4:10-14ರಲ್ಲಿ ಅರಿಸ್ತಾರ್ಕ, ಮಾರ್ಕ, ಯೂಸ್ತನೆನಿಸಿಕೊಳ್ಳುವ ಮಾರ್ಕ, ಎಪಫ್ರ, ಲೂಕ, ಮತ್ತು ದೇಮ ಎಂಬವರು ತುಖಿಕ ಹಾಗೂ ಒನೇಸಿಮರ ನಂತರದಲ್ಲಿ ಪಟ್ಟಿ ಮಾಡಲ್ಪಟ್ಟಿರುತ್ತಾರೆ.

## ಜೊತೆ ಕೆಲಸದವರಿಂದ ವಂದನೆಗಳು (4:10-14)

**10ನನ್ನ ಜೊತೆಸೆರೆಯವನಾದ ಅರಿಸ್ತಾರ್ಕನೂ ಬಾರ್ನಬನಿಗೆ ದಾಯಾದನಾಗಿರುವ ಮಾರ್ಕನೂ ನಿಮಗೆ ವಂದನೆ ಹೇಳುತ್ತಾರೆ. ಮಾರ್ಕನನ್ನು ಕುರಿತು ಅಪ್ಪಣೆಗಳನ್ನು ಹೊಂದಿದರಲ್ಲಾ; ಅವನು ನಿಮ್ಮ ಬಳಿಗೆ ಬಂದರೆ ಅವನನ್ನು ಸೇರಿಸಿಕೊಳ್ಳಿರಿ.**
**11ಯೂಸ್ತನೆನಿಸಿಕೊಳ್ಳುವ ಯೇಸು ಸಹ ನಿಮಗೆ ವಂದನೆಹೇಳುತ್ತಾನೆ. ಸುನ್ನತಿಯವರೊಳಗೆ ಇವರು ಮಾತ್ರವೇ ದೇವರ ರಾಜ್ಯಾಭಿವೃದ್ಧಿಗಾಗಿ ನನ್ನ ಜೊತೆಗೆಲಸದವರಾಗಿದ್ದಾರೆ; ಇದರಿಂದ ನನಗೆ ಉಪಶಮನ ಉಂಟಾಯಿತು. 12ಕ್ರಿಸ್ತ ಯೇಸುವಿನ ದಾಸನಾಗಿರುವ ನಿಮ್ಮ**
**ಊರಿನ ಎಪಫ್ರನು ನಿಮಗೆ ವಂದನೆಹೇಳುತ್ತಾನೆ; ಇವನು ಪ್ರಾರ್ಥನೆ ಮಾಡುವಾಗಲೆಲ್ಲಾ**

**ನಿಮಗೋಸ್ಕರ ಹೋರಾಡಿ ನೀವು ಪ್ರವೀಣರಾಗಿಯೂ ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತವನ್ನು ಕುರಿತು ಪೂರ್ಣ ನಿಶ್ಚಯವುಳ್ಳವರಾಗಿಯೂ ನಿಂತಿರಬೇಕೆಂದು ವಿಜ್ಞಾಪನೆ ಮಾಡುತ್ತಾನೆ. [13]ಇವನು ನಿಮಗೋಸ್ಕರವೂ ಲವೊದಿಕೀಯದವರಿಗೋಸ್ಕರವೂ ಹಿರಿಯಾಪೊಲಿಯವರಿಗೋಸ್ಕರವೂ ಬಹಳ ಪ್ರಯಾಸ ಪಡುತ್ತಾನೆಂದು ಸಾಕ್ಷಿಹೇಳುತ್ತೇನೆ. [14]ಪ್ರಿಯ ವೈದ್ಯನಾಗಿರುವ ಲೂಕನು ಮತ್ತು ದೇಮನು ನಿಮಗೆ ವಂದನೆಹೇಳುತ್ತಾರೆ. ಲವೊದಿಕೀಯದಲ್ಲಿರುವ ಸಹೋದರರಿಗೂ ನುಂಫಳಿಗೂ ಆಕೆಯ ಮನೆಯಲ್ಲಿ ಕೂಡುವ ಸಭೆಯವರಿಗೂ ವಂದನೆ ಹೇಳಿರಿ.**

## "ನನ್ನ ಜೊತೆಸೆರೆಯವನಾದ ಅರಿಸ್ತಾರ್ಕನೂ . . . ನಿಮಗೆ ವಂದನೆ ಹೇಳುತ್ತಾರೆ" (4:10)

**ಅರಿಸ್ತಾರ್ಕನು**, ಆತನ ಹೆಸರಿನ ಅರ್ಥವು "ಉತ್ತಮ ದೊರೆ" ಎಂಬುದಾಗಿದ್ದು, ಆತನ ಸ್ವಂತ ಊರು ಮಕೆದೋನ್ಯದಲ್ಲಿರುವ ಥೆಸಲೋನಿಕವಾಗಿತ್ತು. ಆತನು ಪೌಲನ ಮೂರನೆಯ ಸುವಾರ್ತಾ ಪ್ರಯಾಣದಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಆತನೊಂದಿಗೆ ಪ್ರಯಾಣ ಮಾಡಿರುತ್ತಾನೆ. ವಂದನೆಗಳನ್ನು ಹೇಳುವವರ ಪಟ್ಟಿಯಲ್ಲಿ ಈತನ ಹೆಸರನ್ನು ಮೊದಲು ಸೇರ್ಪಡೆಗೊಳಿಸಿರುವದು ಆತನ ಮೇಲೆ ಪೌಲನಿಗಿದ್ದ ಗೌರವವನ್ನು ತೋರಿಸುತ್ತದೆ. ಆತನು ಪೌಲನ ಸಂಗಡ ಅವರಿಬ್ಬರು ಭೇಟಿಯಾದ ಮೊದಲ ಸಂದರ್ಭದಲ್ಲಿಯೇ ನಿಕಟ ಸಂಬಂಧವನ್ನು ಬೆಳೆಸಿಕೊಂಡಿರಬಹುದಾಗಿದೆ ಯಾಕೆಂದರೆ ಬಹುಶಃ ಪೌಲನ ಸಂಗಡ ರೋಮಾಪುರಕ್ಕೆ ಸಮುದ್ರ ಪ್ರಯಾಣವನ್ನು ಮಾಡಿದವರಲ್ಲಿ ಈತನು ಹಾಗೂ ಲೂಕನು ಮಾತ್ರವೇ ಸೇರಿದ್ದರು (ಅಪೊಸ್ತಲರ ಕೃತ್ಯಗಳು 27:2).

**ನನ್ನ ಜೊತೆಸೆರೆಯವನಾದ** (συναιχμάλωτός μου, *sunaichmalōtos mou*) ಎಂಬ ಪದಗುಚ್ಛವು, ಅಕ್ಷರಶಃ ಅನುವಾದಿಸಲ್ಪಡುವದಾದರೆ, ಅರಿಸ್ತಾರ್ಕನನ್ನು ಪೌಲನ "ಜೊತೆಯುದ್ಧ ಕೈದಿ" ಎಂದು ಬಣ್ಣಿಸುತ್ತದೆ. ಅದೇ ಪದಗುಚ್ಛವನ್ನು ರೋಮಾ 16:7ರಲ್ಲಿ ಪೌಲನ ಸ್ವಜನರಾದ ಅಂದ್ರೋನಿಕ ಹಾಗೂ ಯೂನ್ಯನನಿಗೆ ಅನ್ವಯಿಸಲಾಗಿರುತ್ತದೆ. ಈ ರೀತಿಯಲ್ಲಿ ಫಿಲೆಮೋನನಿಗೆ ಬರೆದ ಪತ್ರಿಕೆಯಲ್ಲಿ ಪೌಲನು ಅರಿಸ್ತಾರ್ಕನ ಕುರಿತಾಗಿ ಅಲ್ಲ, ಆದರೆ ಎಪಫ್ರನನ್ನು ಉದ್ದೇಶಿಸಿ ಮಾತಾಡುತ್ತಾನೆ. ಬಹುಶಃ ಈ ಶಬ್ದ ಪ್ರಯೋಗವು ಸೂಚಿಸುವದೇನೆಂದರೆ ಅರಿಸ್ತಾರ್ಕನು ಪೌಲನ ಸಂಗಡ ಸೆರೆಯಲ್ಲಿದ್ದನು, ಮತ್ತು ಒಂದೇ ಕಾರಾಣಕ್ಕಾಗಿಯೇ – ಸುವಾರ್ತೆಯನ್ನು ಸಾರಿದ ಕಾರಣಕ್ಕೆ – ಎಂಬದೆ. ಯೇಸುವಿನ ಸೇವೆಯನ್ನು ಮಾಡುವದಕ್ಕೆ ಬಂಧನದಲ್ಲಿರುವ ಅಥವಾ ಆತ್ಮೀಕವಾಗಿ ಸೆರೆಯಲ್ಲಿರುವಂಥ ಒಬ್ಬನು ಎಂಬದಾಗಿ ಸೂಚಿಸಲು ಇದನ್ನು ಪೌಲನು ಸಾಂಕೇತಿಕವಾದ ಅರ್ಥದಲ್ಲಿ ಬಳಸಿರಬಹುದಾಗಿದೆ. ಬಹಳ ಸಂಭಾವ್ಯತೆಯಲ್ಲಿ, "ಸೆರೆಯವನಾದ" ಎಂಬದನ್ನು ಅಕ್ಷರಶಃ ಅರ್ಥದಲ್ಲಿ ತೆಗೆದುಕೊಳ್ಳತಕ್ಕದ್ದು. ಪೌಲನು ಯೇಸುವಿಗೋಸ್ಕರ ಹೋರಾಡುತ್ತಿದ್ದ ನಾದ್ದರಿಂದ ತನ್ನನ್ನು ಒಬ್ಬ ಸೈನಿಕನೆಂಬದಾಗಿ ಭಾವಿಸಿಕೊಂಡಿದ್ದನು. ಕ್ರಿಸ್ತನಿಗಾಗಿ ನಡಿಸಲ್ಪಡುತ್ತಿದ್ದ ಆತ್ಮೀಕ ಯುದ್ಧದಲ್ಲಿ ಅರಿಸ್ತಾರ್ಕನು ಪೌಲನಿಗೆ ಜೊತೆಯಾಗಿ ಕಾದಾಡುವವನಾಗಿದ್ದನು.

ಅರಿಸ್ತಾರ್ಕನ ಬಗ್ಗೆ ಮೊದಲ ಬಾರಿಗೆ ಅಪೊಸ್ತಲರ ಕೃತ್ಯಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತದೆ. ಪೌಲನ ವಿರುದ್ಧವಾಗಿ ಜನರು ದೊಂಬಿ ಎದ್ದ ಸಂದರ್ಭದಲ್ಲಿ ಆತನು ಎಫೆಸದಲ್ಲಿಯೇ ಇದ್ದನು.

ಜನರ ಗುಂಪು ಗಾಯನನ್ನೂ ಅರಿಸ್ತಾರ್ಕನನ್ನೂ ಹಿಡಿದುಕೊಂಡು ನಾಟಕ ಶಾಲೆಯೊಳಗೆ ಕರೆದೊಯ್ದರು (19:29). ಮಕೆದೋನ್ಯದ ಮೂಲಕವಾಗಿ ಪೌಲನ ಜೊತೆಯಲ್ಲಿ ಪ್ರಯಾಣಿಸಿದ ಬಳಿಕ, ಪೌಲನಿಗೋಸ್ಕರ ತ್ರೋವದಲ್ಲಿ ಕಾಯುವದಕ್ಕಾಗಿ ಆತನು ಬೇರೆಯವರ ಸಂಗಡ ಮುಂದಾಗಿ ಪ್ರಯಾಣಿಸಿದನು (20:4, 5). ಪೌಲನು ಯೆರೂಸಲೇಮಿನಲ್ಲಿನ ಸಹೋದರರಿಗೋಸ್ಕರ ಕಾಣಿಕೆಗಳನ್ನು ಕೊಂಡೊಯ್ಯುವ ವೇಳೆ ಈತನು ಮತ್ತು ಸೆಕುಂದನು ನಿಯೋಗಿಗಳಾಗಿ ಆತನೊಂದಿಗೆ ಪ್ರಯಾಣಿಸಿದರು (ನೋಡಿರಿ ಅಪೊಸ್ತಲರ ಕೃತ್ಯಗಳು 24:17). ಎರಡು ವರ್ಷಗಳ ತರುವಾಯ (ಅಪೊಸ್ತಲರ ಕೃತ್ಯಗಳು 24:27), ಈತನು ಮತ್ತು ಲೂಕನು ಆಗ ಸೆರೆಯವನಾಗಿದ್ದ, ಪೌಲನ ಸಂಗಡ ಕೈಸರೈದಿಂದ ರೋಮಾಪುರಕ್ಕೆ ಪ್ರಯಾಣವನ್ನು ಆರಂಭಿಸಿದರು (27:1, 2). ಆತನು ರೋಮಾಪುರದಲ್ಲಿ, ಪೌಲನಿಗೆ ಉಪಚಾರ ಮಾಡುವವನಾಗಿಯೋ ಅಥವಾ ಆತನ ಜೊತೆಸೆರೆಯವನಾಗಿಯೋ ಉಳಿದನು. ಪೌಲನು ಮತ್ತು ಲೂಕನು ಬೇರೆ ಹಡಗನ್ನು ಹತ್ತಿಕೊಂಡ ಸ್ಥಳವಾದ ಮುರದಿಂದ, ಈತನು ತನ್ನ ಸ್ವಂತ ಊರಾದ ಥೆಸಲೋನಿಕಕ್ಕೆ ಹಿಂದಿರುಗಿದನು ಎಂಬದಾಗಿ ಕೆಲವರು ಅಭಿಪ್ರಾಯ ಪಡುತ್ತಾರೆ (27:5, 6). ಇದು ಸಂದೇಹಾಸ್ಪದವಾಗಿರುತ್ತದೆ, ಯಾಕೆಂದರೆ ಪೌಲನು ಕೊಲೊಸ್ಸೆಯವರಿಗೆ ಪತ್ರಿಕೆಯನ್ನು ಬರೆಯುವ ವೇಳೆ ಈತನು ಪೌಲನೊಂದಿಗೇ ಇದ್ದನು.

### "ಬಾರ್ನಬನಿಗೆ ದಾಯದನಾಗಿರುವ ಮಾರ್ಕನೂ . . .<br>ಮಾರ್ಕನನ್ನು ಕುರಿತು ನೀವು ಅಪ್ಪಣೆಗಳನ್ನು ಹೊಂದಿದಿರಲ್ಲಾ;<br>ಅವನು ನಿಮ್ಮ ಬಳಿಗೆ ಬಂದರೆ ಅವನನ್ನು ಸೇರಿಸಿಕೊಳ್ಳಿರಿ" (4:10)

ಪೌಲನ ಹಾಗೆಯೇ (ಅಪೊಸ್ತಲರ ಕೃತ್ಯಗಳು 13:9), **ಮಾರ್ಕನು** ಸಹ ಎರಡು ಹೆಸರುಗಳನ್ನು ಹೊಂದಿದ್ದನು (ಅಪೊಸ್ತಲರ ಕೃತ್ಯಗಳು 12:25). ಆತನ ಇಬ್ರಿಯ ಹೆಸರು ಯೋಹಾನ – ಅಕ್ಷರಶಃ, "ದೇವರ ಕೃಪಾಭರಿತನು" ಎಂದಾಗಿದೆ – ಮತ್ತು ಆತನ ಗ್ರೀಕ್ ಹೆಸರು "ಮಾರ್ಕ," "ಒಂದು ದೊಡ್ಡ ಸುತ್ತಿಗೆ" ಎಂದರ್ಥವಾಗಿರುತ್ತದೆ. ಪೌಲನು ಆತನನ್ನು ಕೇವಲ ಆತನ ಗ್ರೀಕ್ ಹೆಸರಿನಿಂದಲೇ ಕರೆದನು (ಕೊಲೊಸ್ಸೆ 4:10; 2 ತಿಮೊಥೆ 4:11; ಫಿಲೆಮೋನನಿಗೆ 24), ಅದೇ ಪೇತ್ರನು ಸಹ ಗ್ರೀಕ್ ಹೆಸರಿನಿಂದಲೇ ಕರೆದನು (1 ಪೇತ್ರ 5:13). ಅರಿಸ್ತಾರ್ಕನ ಜೊತೆಯಲ್ಲಿ ಮಾರ್ಕನು ಸಹ ವಂದನೆಗಳನ್ನು ತಿಳಿಸಿದನು.

ಲುಕನು ಮಾರ್ಕನನ್ನು "ಮಾರ್ಕನೆನಿಸಿಕೊಳ್ಳುವ ಯೋಹಾನ" ಎಂಬದಾಗಿ ಪರಿಚಯಿಸುತ್ತಾನೆ (ಅಪೊಸ್ತಲರ ಕೃತ್ಯಗಳು 12:12, 25; ನೋಡಿರಿ 15:37) ಮತ್ತು ಅನಂತರದಲ್ಲಿ ಆತನನ್ನು ಕೇವಲ "ಯೋಹಾನ" ಎಂದು ಕರೆಯುತ್ತಾನೆ (ಅಪೊಸ್ತಲರ ಕೃತ್ಯಗಳು 13:5, 13). ಪೇತ್ರನನ್ನು ಸೆರೆಮನೆಗೆ ಹಾಕಿದ ಸಂದರ್ಭದಲ್ಲಿ ಯೆರೂಸಲೇಮಿನಲ್ಲಿದ್ದ ಕ್ರೈಸ್ತರು ಪೇತ್ರನಿಗೋಸ್ಕರ ಪ್ರಾರ್ಥಿಸುವದಕ್ಕೋಸ್ಕರವಾಗಿ ಆತನ ತಾಯಿಯಾದ ಮರಿಯಳ ಮನೆಯಲ್ಲಿ ಕೂಡಿ ಬಂದಿದ್ದರು. ಪೇತ್ರನು ಸೆರೆಮನೆಯಿಂದ ಬಿಡಿಸಲ್ಪಟ್ಟ ಮೇಲೆ ಆ ಮನೆಗೆ ಹೋದನು, ಇದರಿಂದ ಆ ಮನೆಯು ಕ್ರೈಸ್ತರಿಗಾಗಿ ಕೂಡಿ ಬರಲು ಒಂದು ಮಾನ್ಯತೆಯನ್ನು ಹೊಂದಿದ್ದ ಸ್ಥಳವಾಗಿತ್ತೆಂಬುದು ತೋರಿ ಬರುತ್ತದೆ (ಅಪೊಸ್ತಲರ ಕೃತ್ಯಗಳು 12:12). ಮಾರ್ಕನ ತಂದೆಯ ಕುರಿತಾಗಿ ಏನನ್ನೂ ಹೇಳಲಾಗಿರುವದಿಲ್ಲ.

ಮಾರ್ಕನು ಪೌಲನ ಹಾಗೂ ತನ್ನ **ದಾಯಾದನಾದ** ಬಾರ್ನಬನ ಸಂಗಡ ಮೊದಲ

ಸುವಾರ್ತಾ ಪ್ರಯಾಣವನ್ನು ಆರಂಭಿಸಿದ್ದನು. ಅವರೊಂದಿಗೆ ಕುಪ್ರದ್ವೀಪದಲ್ಲಿನ ಸಲಾಮೀಸ ಮತ್ತು ಪಾಫೋಸ್ ಊರುಗಳಿಗೆ, ನಂತರ ಮುಖ್ಯ ಭೂಭಾಗದಲ್ಲಿನ ಪಂಫುಲ್ಯಕ್ಕೆ ಸೇರಿದ ಪೆರ್ಗೆಗೆ (ಅಪೊಸ್ತಲರ ಕೃತ್ಯಗಳು 13:13) ಪ್ರಯಾಣಿಸಿದ ಬಳಿಕ ಯೆರೂಸಲೇಮಿಗೆ ಹಿಂದಿರುಗಿದನು (ಅಪೊಸ್ತಲರ ಕೃತ್ಯಗಳು 13:5-13).

ಮಾರ್ಕನು ಏಕೆ ಕೆಲಸವನ್ನು ಮಧ್ಯದಲ್ಲಿ ಬಿಟ್ಟು ಹೋದನೆಂಬುದು ಯಾರಿಗೂ ಖಚಿತವಾಗಿ ತಿಳಿಯದು, ಆದರೆ ವಿವಿಧ ಕಾರಣಗಳನ್ನು ಮಂಡಿಸಲಾಗಿರುತ್ತದೆ. ಪೌಲನು ನಾಯಕತ್ವವನ್ನು ವಹಿಸಿಕೊಂಡು ಬಾರ್ನಬನಿಗೆ ಬದಲಾಗಿ ತಾನೇ ಮುಖ್ಯ ಸಂದೇಶಕನಾದನೆಂಬ ಕಾರಣಕ್ಕೆ ಆತನು ಅಸೂಯೆಗೊಂಡಿದ್ದನೋ? ಪೌಲನ ಅನಾರೋಗ್ಯ (ಗಲಾತ್ಯ 4:13-15) ಮತ್ತು ಯಾವದಾದರೊಂದು ವ್ಯಾಧಿಯು ತನಗೂ ಹರಡುವ ಸಾಧ್ಯತೆಯಿದೆಯೆಂಬುದು ಆತನಲ್ಲಿ ಭಯವನ್ನು ಹುಟ್ಟಿಸಿತ್ತೋ? 2 ಕೊರಿಂಥ 11:24-27ರಲ್ಲಿ ಪೌಲನಿಂದ ಅನುಭವಿಸಲಾದಂತಹ ಅನೇಕ ಅಪಾಯಗಳು, ವಿಶೇಷವಾಗಿ ಮನೆಯಿಂದ ದೂರದಲ್ಲಿದ್ದ ಯೌವನಸ್ಥನಲ್ಲಿ ಬೆದರಿಕೆಯನ್ನುಂಟು ಮಾಡಿದ್ದವೋ? ಆತನು ಮನೆಗೆ ಹಿಂದಿರುಗುವದಕ್ಕೆ ಇವುಗಳಲ್ಲಿ ಯಾವ ಕಾರಣವಾದರೂ ಇರಬಹುದಾಗಿದೆ; ಹೇಗೂ, ಮೊದಲನೆಯದು ಕಾರಣ ಆಗಿರುವ ಸಾಧ್ಯತೆ ಬಹಳ ಕಡಿಮೆಯಿರುತ್ತದೆ.

ಮಾರ್ಕನು ಅಷ್ಟೊಂದು ಶೀಘ್ರವಾಗಿ ಕೆಲಸವನ್ನು ಮಧ್ಯದಲ್ಲಿಯೇ ಬಿಟ್ಟಿದ್ದನಾದ ಕಾರಣ, ಆತನು ಇನ್ನೊಂದು ಸುವಾರ್ತಾ ಪ್ರಯಾಣವನ್ನು ಆರಂಭಿಸುವದಕ್ಕೆ ಸಿದ್ಧನಿಲ್ಲವೆಂದು ಪೌಲನ ನಂಬಿಕೆಯಾಗಿತ್ತು. ಇದರ ಫಲಿತವಾಗಿ ಪೌಲ ಹಾಗೂ ಕುಪ್ರದ್ವೀಪದವನೇ ಆಗಿದ್ದ ಬಾರ್ನಬನ ನಡುವೆ ತೀಕ್ಷ್ಣವಾದ ಭಿನ್ನಾಭಿಪ್ರಾಯ ಉಂಟಾಗಿ (ಅಪೊಸ್ತಲರ ಕೃತ್ಯಗಳು 4:36), ಬಾರ್ನಬನು ಬುದ್ಧಿವಂತಿಕೆಯಿಂದ ತನ್ನ ದಾಯದನನ್ನು ಸೇವಾ ಕೆಲಸವನ್ನು ಮಾಡುವದಕ್ಕೆ ಪರಿಚಿತವಾದ ಸ್ವಂತ ಊರಿನ ಪ್ರಾಂತ್ಯಕ್ಕೆ ಕರೆದೊಯ್ದನು (ಅಪೊಸ್ತಲರ ಕೃತ್ಯಗಳು 15:39). ಪೌಲನಿಗೆ ಮಾರ್ಕನ ಬಗ್ಗೆ ಯಾವದೇ ಹಗೆತನವಿರಲಿಲ್ಲ, ಆದರೆ ಯುವಕನು ಇನ್ನಷ್ಟು ಪಕ್ವಗೊಳ್ಳುವ ಮತ್ತು ಅಚಲನಾಗಿರುವ ಅಗತ್ಯತೆಯಿದೆಯೆಂದು ಭಾವಿಸಿದ್ದನಷ್ಟೆ. ಬಾರ್ನಬನು ಸಹ ಇದನ್ನು ಗ್ರಹಿಸಿಕೊಂಡಿದ್ದನು ಮತ್ತು, ಇತರರಿಗೆ ಧೈರ್ಯತುಂಬುವದಕ್ಕೆ ಒಪ್ಪಿಸಿಕೊಂಡಿದ್ದವನಾದ ಅವನು ಬಹುಶಃ ಮಾರ್ಕನನ್ನು ಕ್ರಿಸ್ತನ ಒಬ್ಬ ಉತ್ತಮ ಸೇವಕನಾಗುವಂತೆ ಪ್ರವೀಣಗೊಳಿಸುವದರಲ್ಲಿ ಆತನು ತಾಳ್ಮೆಯಿಂದ ಸಹಾಯ ಮಾಡುವದಕ್ಕೆ ಆತನೊಂದಿಗೆ ಉಳಿದನು. ಇದುವೇ ನಡೆದ ಸಂಗತಿಯಾಗಿದ್ದಲ್ಲಿ, ಬಾರ್ನಬನ ಪರಿಶ್ರಮಗಳೆಲ್ಲಾ ಸಾರ್ಥಕವಾಗಿದ್ದವು.

ಪೌಲನು ಬಾರ್ನಬನ ಬಗ್ಗೆ ಪ್ರಸ್ತಾಪಿಸಿದ ರೀತಿಯನ್ನು ನೋಡಿದರೆ, ಆತನು ಕೊಲೊಸ್ಸೆಯಲ್ಲಿನ ಸಭೆಗೆ ಮಾರ್ಕನಿಗಿಂತಲೂ ಹೆಚ್ಚು ಪರಿಚಿತನಾಗಿದ್ದನೆಂಬದನ್ನು ಸೂಚಿಸಬಹುದಾಗಿದೆ. ಹಾಗಿರುವದಾದಲ್ಲಿ, ಮಾರ್ಕನು "ಬಾರ್ನಬನಿಗೆ ದಾಯಾದನಾಗಿ"ದ್ದ ಕಾರಣ ಕೊಲೊಸ್ಸೆಯವರು ಆತನಲ್ಲಿ ಸಿದ್ಧ ಮನಸ್ಸಿನಿಂದ ಆಸಕ್ತಿಯನ್ನು ವಹಿಸಲಿದ್ದರು.

ಮಾರ್ಕನ ವಿಷಯದಲ್ಲಿ ಪೌಲನ ಮನಸ್ಸಿನಲ್ಲಿ ಏನಿತ್ತೆಂಬುದನ್ನು ಅರ್ಥಮಾಡಿಕೊಳ್ಳಲು ಇಂದಿನ ವಾಚಕರಿಗೆ ಇನ್ನಷ್ಟು ವಿವರಣೆಯ ಅಗತ್ಯವಿರುತ್ತದಾದರೂ, ಪೌಲನು **ಮಾರ್ಕನನ್ನು ಕುರಿತು ಅಪ್ಪಣೆಗಳನ್ನು ಹೊಂದಿದಿರಲ್ಲಾ** ಎಂದು ಬರೆದಾಗ ಆತನ ತಾತ್ಪರ್ಯವು ಏನಾಗಿತ್ತೆಂಬದನ್ನು ಪತ್ರವನ್ನು ತಲುಪಿಸುವದಕ್ಕೆ ಹೊರಟಿದ್ದವರು ಖಂಡಿತವಾಗಿಯೂ

ಅರ್ಥಮಾಡಿಕೊಂಡಿದ್ದರು. ಪೌಲನು ಮಾರ್ಕನ ಕುರಿತಾಗಿ ಇದಕ್ಕೆ ಮುಂಚೆ ಕೊಲೊಸ್ಸೆಯವರ ಸಂಗಡ ಪತ್ರ ವ್ಯವಹಾರವನ್ನು ಮಾಡಿದ್ದನು ಮತ್ತು ಅದನ್ನು ಈ ಪತ್ರಿಕೆಯಲ್ಲಿ ಪುನರಾವರ್ತಿಸಲಿಲ್ಲ. ಆತನು ಅದರಲ್ಲಿ ಮಾರ್ಕನಿಗೆ ಸಭೆಯು ಮಾರ್ಗದರ್ಶನವನ್ನು ಅಥವಾ ಆತನಿಗೆ ವಾಸ ಸ್ಥಳವನ್ನು ಏರ್ಪಾಡು ಮಾಡುವ ಬಗ್ಗೆ ಸಲಹೆಗಳನ್ನು ಸೇರಿಸಿದ್ದಿರಬಹುದು.

ಪೌಲನು **ಅವನನ್ನು ಸೇರಿಸಿಕೊಳ್ಳಿರಿ** (δέχομαι, *dechomai*) ಎಂದು ಹೇಳಿದನು. ಈ ಪದದ ಅರ್ಥವು ಒಬ್ಬ ಭೇಟಿ ಕೊಡುವವನಿಗೆ ಅಥವಾ ಅಥಿತಿಗೆ ಸತ್ಕಾರವನ್ನು ಮಾಡುವದು ಎಂದಾಗಿರುತ್ತದೆ (2 ಕೊರಿಂಥ 3:1).[2] ಒಬ್ಬನು ಆದರದಿಂದ ಸ್ವೀಕರಿಸಿಕೊಳ್ಳಲ್ಪಡುವದನ್ನು ಖಚಿತ ಪಡಿಸುವದಕ್ಕಾಗಿ ಅನೇಕ ಸಾರಿ ಶಿಫಾರಸ್ಸು ಪತ್ರಗಳನ್ನು ಕೊಟ್ಟು ಕಳುಹಿಸಲಾಗುತ್ತಿತ್ತು. ಒಬ್ಬ ಅಪರಿಚಿತ ವ್ಯಕ್ತಿಯನ್ನು ವಾಚಕರು ಸೇರಿಸಿಕೊಂಡು ಆತನಿಗೆ ಸಾಕಾಗುವಷ್ಟು ವಸತಿ ಸೌಲಭ್ಯಗಳನ್ನು ಮಾಡುವಂತಾಗುವ ಹಾಗೆ ಈ ಪತ್ರಗಳನ್ನು ಆ ವ್ಯಕ್ತಿಯು ತಲುಪುವದಕ್ಕೆ ಮುಂಚೆಯೇ ಕಳುಹಿಸಲಾಗುತ್ತಿತ್ತು.

ಮಾರ್ಕನ ಪ್ರಯಾಣದ ಯೋಜನೆಗಳ ಬಗ್ಗೆ ಪೌಲನಿಗೆ ಖಚಿತವಾಗಿ ಗೊತ್ತಿರಲಿಲ್ಲ, ಆದರೆ ಒಂದು ವೇಳೆ ಮಾರ್ಕನು ಕೊಲೊಸ್ಸೆಗೆ ಹೋಗುವದೇ ಆದಲ್ಲಿ ತಾನು ಮುಂಚೆ ನೀಡಿದ್ದ ನಿರ್ದೇಶನಗಳನ್ನು ಸಹೋದರರು ಅನುಸರಿಸಬೇಕೆಂಬದು ಪೌಲನ ಬಯಕೆಯಾಗಿತ್ತು. ಪೌಲ ಹಾಗೂ ಬಾರ್ನಬನ ನಡುವೆ ಇದ್ದದ್ದ ಭಿನ್ನಮತದ ಬಗ್ಗೆ ಕೆಲವರು ಕೇಳಿಸಿಕೊಂಡಿರಬಹುದಿತ್ತು ಮತ್ತು ಮಾರ್ಕನಿಗೆ ದಯೆಯನ್ನು ತೋರಿಸಬೇಕೋ ಮತ್ತು ಆತನ ಅಗತ್ಯತೆಗಳನ್ನು ಒದಗಿಸಬೇಕೋ ಎಂದು ಗೊಂದಲಕ್ಕೀಡಾಗಿದ್ದಿರಬಹುದು. ಅವರು ಆತನನ್ನು "ಸೇರಿಸಿಕೊಳ್ಳಬೇಕು" ಎಂಬದಾಗಿ ಪೌಲನು ನಿಶ್ಚಯಗೊಳಿಸಿದನು. ಆತನು ಆ ಹೊತ್ತಿಗೆ ಪೌಲನ ಜೊತೆಕೆಲಸದವನು ಮತ್ತು ಗೌರವ ಹಾಗೂ ಬೆಂಬಲಕ್ಕೆ ಯೋಗ್ಯನಾಗಿದ್ದನು. ಪೌಲನು ಹೇಳಿದ "ಇವರಿಂದ ನನಗೆ ಉಪಶಮನ ಉಂಟಾಯಿತು" (4:11) ಎಂಬ ಮಾತುಗಳಲ್ಲಿ ಯೂಸ್ತನ ಜೊತೆಯಲ್ಲಿ, ಮಾರ್ಕನೂ ಸೇರಿರುತ್ತಾನೆ. ಒಂದು ಕಾಲದಲ್ಲಿ ಪೌಲನಿಂದ ತಿರಸ್ಕರಿಸಲ್ಪಟ್ಟಿದ್ದ ಯುವಕನು ಈಗ ಆತನಿಗೆ ಒಂದು ಆಶೀರ್ವಾದ ಮತ್ತು ಉಪಶಮನ ಆಗಿ ಮಾರ್ಪಟ್ಟಿದ್ದನು.

ಪೌಲನು ಈ ಪತ್ರಿಕೆಯನ್ನು ಬರೆಯುವ ಹೊತ್ತಿಗೆ ಆತನ ಮತ್ತು ಮಾರ್ಕನ ನಡುವಿನ ಸಂಬಂಧವು ಪುನಃಸ್ಥಾಪಿಸಲ್ಪಟ್ಟಿತ್ತು. ಮಾರ್ಕನು ಪೌಲನನ್ನು ಸೆರೆಮನೆಯಲ್ಲಿ ಭೇಟಿ ಮಾಡುವದಕ್ಕಾಗಿ ರೋಮಾಪುರಕ್ಕೆ ಪ್ರಯಾಣಿಸಿದ್ದನು ಮತ್ತು ಆತನು ಕೊಲೊಸ್ಸೆಯವರಿಗೆ ಹಾಗೂ ಫಿಲೆಮೋನನಿಗೆ ಪತ್ರಿಕೆಗಳನ್ನು ಬರೆಯುವಾಗ ಮಾರ್ಕನು ಆತನ ಜೊತೆಯಲ್ಲಿಯೇ ಇದ್ದನು. ಪೌಲನು ಆತನ ವಿಷಯವಾಗಿ ತಾನು ಹೆಮ್ಮೆ ಪಡಬಹುದಾದ ಹಾಗೂ ಶಿಫಾರಸ್ಸು ಮಾಡಬಹುದಾದ ಒಬ್ಬ ಸಮರ್ಪಣೆಯುಳ್ಳ "ಜೊತೆ" ಕೆಲಸಗಾರನೆಂದು ಬರೆದನು (ಫಿಲೆಮೋನನಿಗೆ 24). ಪೌಲನು ಫಿಲೆಮೋನ, ಅಪ್ಪಿಯ ಹಾಗೂ ಅರ್ಖಿಪ್ಪನಿಗೆ ವಂದನೆಗಳನ್ನು ಹೇಳಿದವರಲ್ಲಿ ತನ್ನನ್ನು ಸೇರ್ಪಡೆಗೊಳಿಸಿದ್ದನು (ಫಿಲೆಮೋನನಿಗೆ 1, 2, 23, 24), ಆತನು ಅವರನ್ನು ವೈಯಕ್ತಿಕವಾಗಿ ಭೇಟಿಯಾಗಿದ್ದ ನೆಂಬುದನ್ನು ಅದು ತೋರಿಸುತ್ತದೆ.

ಅನಂತದಲ್ಲಿ, ಪೌಲ ಹಾಗೂ ಮಾರ್ಕರು ಸ್ವಲ್ಪ ಕಾಲ ಬೇರ್ಪಟ್ಟಿದ್ದರು, ಆದರೆ ರೋಮಾಪುರದಲ್ಲಿ ಪೌಲನ ಎರಡನೆಯ ಸೆರವಾಸದ ವೇಳೆಯಲ್ಲಿ, ಮಾರ್ಕನು ತನಗೆ

ಒದಗಿಸಬಹುದಾದ ಸಹಾಯವನ್ನು ಗ್ರಹಿಸಿಕೊಂಡು ಆತನನ್ನು ಕರೆದುಕೊಂಡು ಬರುವದಕ್ಕೆ ಹೇಳಿದನು. ಆತನು ತಿಮೊಥೆಯನಿಗೆ ಹೀಗೆ ಬರೆದನು, "ಮಾರ್ಕನನ್ನು ಸಂಗಡ ಕರಕೊಂಡು ಬಾ, ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ" (2 ತಿಮೊಥೆ 4:11). ಮಾರ್ಕನು ತಿಮೊಥೆಯನ ಸಂಗಡ ಎಫೆಸದಲ್ಲಿ ಅಥವಾ ಹತ್ತಿರದಲ್ಲಿದ್ದ ಕೊಲೊಸ್ಸೆಯಲ್ಲಿ ಇದ್ದಿರಬಹುದಾಗಿದೆ (1 ತಿಮೊಥೆ 1:3). ಮಾರ್ಕನು ಕೊಲೊಸ್ಸೆಗೆ ಪ್ರಯಾಣಿಸಿದನೆಂಬುದಾಗಿ ಯಾವದೇ ಲಿಖಿತ ದಾಖಲೆಯು ಹೇಳುವದಿಲ್ಲ; ಆದರೆ ಸಣ್ಣ ಸಣ್ಣ ಮಾಹಿತಿಗಳನ್ನು ಒಟ್ಟಾಗಿ ಹೆಣೆಯುವದಾದರೆ, ಆತನು ಅಲ್ಲಿಗೆ ಹೋದನು ಎಂಬದಾಗಿ ನಾವು ತಾರ್ಕಿಕವಾಗಿ ತೀರ್ಮಾನಕ್ಕೆ ಬರಬಹುದಾಗಿದೆ.

ಎಲ್ಲಾ ಸೂಚನೆಗಳ ಅನುಗುಣವಾಗಿ, ಮಾರ್ಕನು ಕರ್ತನಿಗೋಸ್ಕರ ಒಬ್ಬ ದೊಡ್ಡ ಸೇವಕನಾಗಿ ಪಕ್ವಗೊಂಡನು. ಇದು ಒಂದು ಅಸ್ಥಿರವಾದ ಆರಂಭವನ್ನು ಮಾಡಿದ್ದ ವ್ಯಕ್ತಿಯೊಬ್ಬನಿಗೆ ಒಂದು ಸಂತೋಷಕರ ಮುಕ್ತಾಯವಾಗಿತ್ತು. ಬಾಹ್ಯ ಪುರಾವೆಯು ಸೂಚಿಸುವದೇನೆಂದರೆ ಮಾರ್ಕನೆಂಬ ಹೆಸರುಳ್ಳ ಸುವಾರ್ತೆಯ ಬರವಣಿಗೆಯ ಲೇಖಕನು ಈತನೇ ಆಗಿದ್ದಾನೆ. ಪ್ರೇರಣೆಯ ಶಾಸ್ತ್ರಗಳಲ್ಲಿ ಮಾರ್ಕನ ಹೆಸರು ಕಡೇ ಬಾರಿಗೆ ಪೇತ್ರನ ಪತ್ರಿಕೆಯಲ್ಲಿ ಕಾಣಿಸಿಕೊಳ್ಳುವದಾಗಿದ್ದು, ಆತನು ಬಹುಶಃ ರೋಮಾಪುರದಲ್ಲಿ, ಪೇತ್ರನ ಸಂಗಡ ಇದ್ದನೆಂಬುದನ್ನು ತೋರಿಸುತ್ತದೆ (1 ಪೇತ್ರ 5:13).

### "ಯೊಸ್ತನೆನಿಸಿಕೊಳ್ಳುವ ಯೇಸು ಸಹ" (4:11)

ಪೌಲನು ನಂತರ ಸೇರ್ಪಡೆಗೊಳಿಸಿದ ಸಂಗಡಿಗನೆಂದರೆ **ಯೊಸ್ತನೆನಿಸಿಕೊಳ್ಳುವ ಯೇಸು**. "ಯೇಸು" (Ἰησοῦς, *Iēsous*) ಎಂಬುದು ಇಬ್ರಿಯ ಭಾಷೆಯ "ಯೆಹೋಶುವ" — ಅಕ್ಷರಶಃ, "ದೇವರು ರಕ್ಷಿಸುವನು" ಅಥವಾ "ದೇವರು ರಕ್ಷಣೆಯಾಗಿದ್ದಾನೆ" — ಎಂಬದರ ರೂಪವಾಗಿರುತ್ತದೆ. ಈ ಹೆಸರು ಯೆಹೂದಿ ಸಮುದಾಯಗಳಲ್ಲಿ ಸರ್ವಸಾಧಾರಣವಾಗಿತ್ತು (ಅಪೊಸ್ತಲರ ಕೃತ್ಯಗಳು 13:6), ಅದು ಲೋಕದ ರಕ್ಷಕನಾದ ಯೇಸುವಿನ ಹೆಸರೇ ಆಗಿರುತ್ತದೆ. ಎರಡನೆಯ ಶತಮಾನದಲ್ಲಿ ಅಭ್ಯಾಸಗತವಾಗಿ ಯಾವನೊಬ್ಬನಿಗೂ ಈ ಹೆಸರನ್ನು ಕೊಡಲಾಗಿರಲಿಲ್ಲ. ಪೌಲನೊಂದಿಗಿದ್ದ ವ್ಯಕ್ತಿಯು ಯೊಸ್ತನು ಎಂದು ಸಹ ಕರೆಯಲ್ಪಟ್ಟಿರುತ್ತಾನೆ, ಇದು ಯೆಹೂದ್ಯರಲ್ಲಿ ಸಾಮಾನ್ಯವಾಗಿರುತ್ತಿದ್ದ ಒಂದು ಲ್ಯಾಟಿನ್ ಹೆಸರಾಗಿದ್ದು, "ನೀತಿವಂತ" ಅಥವಾ "ನ್ಯಾಯವಾದವನು" ಎಂದರ್ಥವನ್ನು ಹೊಂದಿರುತ್ತದೆ.

"ಯೊಸ್ತನೆನಿಸಿಕೊಳ್ಳುವ" ಎಂಬುದರ ಪರೋಕ್ಷ ಅರ್ಥವೇನೆಂದರೆ ಆತನು ತನ್ನ "ಯೇಸು" ಎಂಬ ಯೆಹೂದಿ ಹೆಸರಿಗಿಂತಲೂ ತನ್ನ ಲ್ಯಾಟಿನ್ ಹೆಸರಿನಿಂದಲೇ ಹೆಚ್ಚು ಪರಿಚಿತನಿದ್ದನು ಎಂಬದೆ. ಯೆಹೂದಿ ಸಂಸ್ಕೃತಿಯಲ್ಲಿ ಒಂದು ಇಬ್ರಿಯ ಹೆಸರು ಮತ್ತು ಇನ್ನೊಂದನ್ನು ಗ್ರೀಕ್ ಹೆಸರನ್ನಾಗಿಯೂ ಇಟ್ಟುಕೊಳ್ಳುವದು ಸರ್ವಸಾಧಾರಣವಾಗಿತ್ತು. ಇದಕ್ಕೆ ಉದಾಹರಣೆಗಳೆಂದರೆ "ಪೇತ್ರನೆನಿಸಿಕೊಳ್ಳುವ ಸೀಮೋನ" (ಮತ್ತಾಯ 4:18), "ಯೋಸೇಫನೆಂಬವನು . . . ಬಾರ್ನಬ" (ಅಪೊಸ್ತಲರ ಕೃತ್ಯಗಳು 4:36), ಮತ್ತು "ಮಾರ್ಕನೆನಿಸಿಕೊಳ್ಳುವ ಯೋಹಾನ" (ಅಪೊಸ್ತಲರ ಕೃತ್ಯಗಳು 12:12).

## "ಸುನ್ನತಿಯವರೊಳಗೆ ಇವರು ಮಾತ್ರವೇ ದೇವರ ರಾಜ್ಯಾಭಿವೃದ್ಧಿಗಾಗಿ ನನ್ನ ಜೊತೆಗೆಲಸದವರಾಗಿದ್ದಾರೆ; ಇವರಿಂದ ನನಗೆ ಉಪಶಮನ ಉಂಟಾಯಿತು" (4:11)

**ಜೊತೆಗೆಲಸದವರು** (συνεργοί, *sunergoi*) ಎಂಬುದು ಒಟ್ಟಾರೆಯಾಗಿ ಕ್ರೈಸ್ತರೆಲ್ಲರಿಗೂ ಅನ್ವಯವಾಗುವದಿಲ್ಲ, ಆದರೆ ಸುವಾರ್ತೆಯನ್ನು ಪ್ರಸಾರಣೆ ಮಾಡುವದಕ್ಕೆ ಪ್ರಯಾಸ ಪಡುವ ಮೂಲಕ ಬೇರೆಯವರಿಂದ ಭಿನ್ನವಾಗಿರುವವರಿಗೆ ಅನ್ವಯವಾಗುತ್ತದೆ (ನೋಡಿರಿ 3 ಯೋಹಾನ 8). ಅದು ದೇವರ ಜೊತೆಯಾಗಿ ಸಹ ಬಳಸಲ್ಪಟ್ಟಿದೆ (1 ಕೊರಿಂಥ 3:9; 1 ಥೆಸಲೋನಿಕ 3:2), "ಕ್ರಿಸ್ತನಲ್ಲಿ" (ರೋಮಾ 16:3, 9), ಪೌಲನ ಜೊತೆಯಾಗಿ (ರೋಮಾ 16:21; ಫಿಲಿಪ್ಪಿ 2:25; 4:3; ಫಿಲೆಮೋನನಿಗೆ 24), ಮತ್ತು ಕ್ರೈಸ್ತ ಸಮುದಾಯಕ್ಕೋಸ್ಕರ ಪ್ರಯಾಸ ಪಡುವವರಿಗೆ ಸಹ ಅನ್ವಯಿಸಲ್ಪಟ್ಟಿರುತ್ತದೆ (2 ಕೊರಿಂಥ 1:24; 8:23).

ಪೌಲನು **ದೇವರ ರಾಜ್ಯ**ವನ್ನು ಕುರಿತು ಒಂದು ವರ್ತಮಾನ ಕಾಲದ ವಾಸ್ತವಿಕತೆಯೆಂಬದಾಗಿ ಮಾತಾಡಿದನು (ನೋಡಿರಿ 1:13; ರೋಮಾ 14:17; 2 ಥೆಸಲೋನಿಕ 1:5). ಆತನು ಎಫೆಸದಲ್ಲಿ ಜನರ ಮನವೊಲಿಸುವವನಾಗಿ ಮತ್ತು ರೋಮಾಪುರ ಸೇರಿದಂತೆ ಇತರ ಸ್ಥಳಗಳಲ್ಲಿ ಸಾರುವ ವೇಳೆ, ಆತನು ಈ ರಾಜ್ಯದ ಕುರಿತಾಗಿ ಉಪದೇಶ ಮಾಡಿದನು. ಬೇರೆ ಸನ್ನಿವೇಶಗಳಲ್ಲಿ "ದೇವರ ರಾಜ್ಯವು" ಈ ಜೀವನದ ನಂತರದ ಒಂದು ಮಂಡಲವಾಗಿರುತ್ತದೆ.[3] ಪೌಲನು ಈ ಪದವನ್ನು ಹದಿಮೂರರಲ್ಲಿನ ಆರು ಪತ್ರಿಕೆಗಳಲ್ಲಿ ಸೇರ್ಪಡೆಗೊಳಿಸಿರುತ್ತಾನೆ (ರೋಮಾ 14:17; 1 ಕೊರಿಂಥ 6:9, 10; 15:50; ಗಲಾತ್ಯ 5:21; ಎಫೆಸ 5:5; ಕೊಲೊಸ್ಸೆ 4:11; 2 ಥೆಸಲೋನಿಕ 1:5).

ಪೌಲನು ಉಲ್ಲೇಖಿಸಿರುವ ಮೂವರು ಯೆಹೂದ್ಯರಾಗಿದ್ದರೆಂಬುದನ್ನು ಸ್ಪಷ್ಟವಾಗಿ ತಿಳಿಸುವದಿಲ್ಲ; ಅವರು **ಸುನ್ನತಿಯವರೊಳಗೆ** ಎಂಬುದಾಗಿ ಎಂದು ಹೇಳಿದನು. ಸನ್ನಿವೇಶವು ಸೂಚಿಸುವ ಹೊರತು, "ಯೆಹೂದ್ಯರು" ಎಂಬ ಹೆಚ್ಚು ಕಡಿಮೆ ಎಲ್ಲಾ ವೇಳೆಯಲ್ಲಿಯೂ ಕ್ರೈಸ್ತತ್ವಕ್ಕೆ ಪರಿವರ್ತನೆಗೊಳ್ಳದಂಥ ಧರ್ಮಶಾಸ್ತ್ರವನ್ನು ಅನುಸರಿಸುವ ವರನ್ನು ಸೂಚಿಸುವದಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 9:22, 23; 13:43, 45). ಇನ್ನೊಂದೆಡೆಯಲ್ಲಿ, ಯೆಹೂದಿ ನಂಬಿಕೆಯ ಹಿನ್ನಲೆಯಿಂದ ಕ್ರೈಸ್ತನಾಗಿರುವಂಥ ಒಬ್ಬನು, ಜನಾಂಗೀಯವಾಗಿ ಆಗಲೂ ಯೆಹೂದ್ಯನೆಂದು ಪರಿಗಣಿಸಲ್ಪಟ್ಟಿರುತ್ತಿದ್ದನು. ಪೇತ್ರನು ಒಬ್ಬ ಯೆಹೂದ್ಯನು ಅನ್ಯಜನರ ಸಂಗಡ ಸಹವಾಸವನ್ನಿಟ್ಟುಕೊಳ್ಳಬಾರದೆಂಬ ತನ್ನ ಹೇಳಿಕೆಯೊಳಗೆ ತನ್ನನ್ನು ಸಹ ಸೇರ್ಪಡೆಗೊಳಿಸಿಕೊಂಡನು (ಅಪೊಸ್ತಲರ ಕೃತ್ಯಗಳು 10:28). ಒಬ್ಬ ಕ್ರೈಸ್ತನಾಗಿದ್ದ ಅಕ್ವಿಲನು ಯೆಹೂದ್ಯನೆಂದು ಕರೆಯಲ್ಪಟ್ಟನು (ಅಪೊಸ್ತಲರ ಕೃತ್ಯಗಳು 18:2), ಮತ್ತು ಯಾಕೋಬನು ಕೆಲವೊಂದು ವಿಶ್ವಾಸಿಗಳನ್ನು ಯೆಹೂದ್ಯರೆಂದು ಕರೆದನು (ಅಪೊಸ್ತಲರ ಕೃತ್ಯಗಳು 21:20, 21). ಪೌಲನು, ತಾನು ಒಬ್ಬ ಕ್ರೈಸ್ತನಾದ ಬಳಿಕ, ಆಗಲೂ ತನ್ನನ್ನು ಒಬ್ಬ ಯೆಹೂದ್ಯನೆಂದು ಕರೆದುಕೊಂಡನು (ಅಪೊಸ್ತಲರ ಕೃತ್ಯಗಳು 21:39; 22:3).

ಪೌಲನಿಗೆ ಅರಿಸ್ತಾರ್ಕ, ಮಾರ್ಕ, ಮತ್ತು ಯೂಸ್ತ ಇವರ ಮೂಲಕ **ಉಪಶಮನ**

(παρηγορία, *parēgoria*) ದೊರಕಿತ್ತು. ಈ ಪದವು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಬೈಬಲ್ ಹೊರಗಿನ ಸಾಹಿತ್ಯದಲ್ಲಿ, ಇದರ ಅರ್ಥದಲ್ಲಿ "ಆದರಣೆ" ಎಂಬುದು ಸೇರಿರುತ್ತದೆ. ಆತನು ಕ್ರಿಸ್ತನ ಒಬ್ಬ ದೊಡ್ಡ ಸೇವಕನಾಗಿದ್ದಾಗ್ಯೂ, ಪೌಲನಿಗೂ ಸಹ ಇತರರ ಹಾಗೆಯೇ ಉಪಶಮನದ ಅಗತ್ಯವಿತ್ತು. ಆತನು ಕೊರಿಂಥದಲ್ಲಿದ್ದ ವೇಳೆಯಲ್ಲಿ ಕ್ರಿಸ್ತನು ಆತನಿಗೆ ಕಾಣಿಸಿಕೊಂಡು ಆತನನ್ನು ಧೈರ್ಯಪಡಿಸಿದನು (ಅಪೊಸ್ತಲರ ಕೃತ್ಯಗಳು 18:9, 10; ನೋಡಿರಿ 2 ಕೊರಿಂಥ 1:3, 4). ಆತನು ಒಬ್ಬಂಟಿಗನಾಗಿ ಪ್ರಯಾಣಿಸುವದಾಗಲಿ ಅಥವಾ ಉಳಿದುಕೊಳ್ಳುವದಾಗಲಿ ವಿರಳವಾಗಿತ್ತು, ಆದರೆ ತನ್ನೊಂದಿಗೆ ಯಾವಾಗಲೂ ಇತರರನ್ನು ಇಟ್ಟುಕೊಳ್ಳಲು ಬಯಸಿದನು. ಆತನು ತನ್ನ ಎರಡನೆಯ ಸುವಾರ್ತಾ ಪ್ರಯಾಣದ ವೇಳೆ ಅಥೇನೆಗೆ ಬಂದು ತಲುಪಿದಾಗ, ಸೀಲನಿಗೂ ತಿಮೊಥೆಯನಿಗೂ "ಕೂಡಿದ ಮಟ್ಟಿಗೆ ಬೇಗ ನನ್ನ ಬಳಿಗೆ ಬರಹೇಳಿರಿ" ಎಂದು ಹೇಳಿ ಕಳುಹಿಸಿದನು (ಅಪೊಸ್ತಲರ ಕೃತ್ಯಗಳು 17:15). ಆತನು ಥೆಸಲೋನಿಕದವರ ಮೇಲಿದ್ದ ಗಾಢವಾದ ಹಿತಾಸಕ್ತಿಯ ಕಾರಣದಿಂದಾಗಿಯಷ್ಟೇ ಆತನು ಅಥೇನೆಯಲ್ಲಿ ಏಕಾಂಗಿಯಾಗಿರುವದಕ್ಕೆ ಮನಸ್ಸು ಮಾಡಿದ್ದನು (1 ಥೆಸಲೋನಿಕ 3:1). ಆತನಿಗೆ ಸಂಗಡ ಇರುವವರ ಅಗತ್ಯವಿದೆ ಎಂದು ಅನ್ನಿಸಿತ್ತು, ಯಾಕೆಂದರೆ ಆತನು ಹೀಗೆ ಬರೆಯುತ್ತಾನೆ, "ಕ್ರಿಸ್ತನ ಸುವಾರ್ತೆಯನ್ನು ಸಾರುವದಕ್ಕಾಗಿ ನಾನು ತ್ರೋವಕ್ಕೆ ಬರಲು ಕರ್ತನ ಕೃಪೆಯಿಂದ ನನಗೆ ಒಳ್ಳೇ ಸಂದರ್ಭ ಉಂಟಾಯಿತು. ಆದರೂ ನನ್ನ ಸಹೋದರನಾದ ತೀತನು ನನಗೆ ಸಿಕ್ಕಲಿಲ್ಲವಾದ ಕಾರಣ ನನ್ನ ಆತ್ಮಕ್ಕೆ ಉಪಶಮನವಿಲ್ಲದೆ . . . " (2 ಕೊರಿಂಥ 2:12, 13).

### "ಕ್ರಿಸ್ತ ಯೇಸುವಿನ ದಾಸನಾಗಿರುವ ನಿಮ್ಮ ಊರಿನ ಎಪಫ್ರನು" (4:12)

**ಎಪಫ್ರ**, "ಲೂಕ," ಮತ್ತು "ದೇಮ" (ನೋಡಿರಿ ವ. 14) ಇವೆಲ್ಲಾ ಅನ್ಯಜನಾಂಗದ ಹೆಸರುಗಳಾಗಿವೆ. ಪೌಲನು ತನ್ನ ಸಂಗಡವಿದ್ದ ಯೆಹೂದ್ಯರಿಂದ ವಂದನೆಗಳನ್ನು ತಿಳಿಸಿದ ಬಳಿಕ, ಆತನು ತನ್ನ ಈ ಹೆಸರುಗಳುಳ್ಳ ಅನ್ಯಜನಾಂಗಕ್ಕೆ ಸೇರಿದ ಸಂಗಡಿಗರಿಂದ ವಂದನೆಗಳನ್ನು ತಿಳಿಸುವದಕ್ಕೆ ಮುಂದುವರೆಯುತ್ತಾನೆ.

ಪೌಲನು ತನ್ನ ಪತ್ರಿಕೆಯ ಪೀಠಿಕೆಯಲ್ಲಿ ಎಪಫ್ರನನ್ನು ಒಬ್ಬ ಜೊತೆ ಸೇವಕನನ್ನಾಗಿ ಸೇರ್ಪಡೆಗೊಳಿಸುವ ಮೂಲಕ ಆತನ ಕಡೆಗೆ ತನಗಿರುವ ಉನ್ನತವಾದ ಗೌರವವನ್ನು ಪ್ರಕಟಗೊಳಿಸಿದನು (1:7). ಆತನ ಪೂರ್ಣ ಹೆಸರು ಎಪಫ್ರೊದೀತ. ಪೌಲನು ಫಿಲಿಪ್ಪಿಯವರಿಗೆ ಪತ್ರಿಕೆಯನ್ನು ಬರೆಯುವಾಗ ಆತನ ಸಂಗಡ ಇದ್ದ ಫಿಲಿಪ್ಪಿಗೆ ಸೇರಿದ ವ್ಯಕ್ತಿಯು ಈತನಾಗಿರುವದಿಲ್ಲ (ಫಿಲಪ್ಪಿ 2:25; 4:18).

ಎಪಫ್ರನು ಕೊಲೊಸ್ಸೆಯವರಿಗೆ ಆಪ್ತನಾಗಿದ್ದಿರಬಹುದಾಗಿದೆ. ಪೌಲನು ಏಕೆ ಎಪಫ್ರನನನ್ನು ತಿಮೊಥೆಯನ ಸಂಗಡ ಅಥವಾ ತಿಮೊಥೆಯನಿಗೆ ಬದಲಾಗಿ ಸೇರ್ಪಡೆಗೊಳಿಸಲಿಲ್ಲ? ಪತ್ರಿಕೆಯನ್ನು ಬರೆಯುವದಕ್ಕೆ ಸಹಾಯ ಮಾಡಿದವನೆಂಬದಾಗಿ ಆತನನ್ನು ಏಕೆ ಪೀಠಿಕೆಯಲ್ಲಿ ಸೇರ್ಪಡೆಗೊಳಿಸಲಿಲ್ಲ? ಒಬ್ಬ ಸೆರೆಯಾಳಾಗಿ, ಆತನು ಪೌಲನಿಂದ ಬೇರ್ಪಟ್ಟಿರಬೇಕು ಮತ್ತು ಯಾವಾಗಲಾದರೂ ಒಮ್ಮೆ ಪೌಲನನ್ನು ಭೇಟಿ ಮಾಡುತ್ತಿದ್ದಿರಬಹುದಾಗಿದೆ. ಅಲ್ಲದೆ, ಆತನು ಪೌಲನ ಸಂಗಡ ಸೆರೆಯಾಳಾಗಿರುವದಾದರೆ (ಫಿಲೆಮೋನನಿಗೆ 23), ಆತನಿಗೆ ಪ್ರಯಾಣಿಸುವದು ಅಸಾಧ್ಯವಾಗಿರುತ್ತಿತ್ತು, ಅದಕ್ಕಾಗಿಯೇ ಪೌಲನು ಪತ್ರಿಕೆಯನ್ನು ಕೊಂಡೊಯ್ಯುವಂತೆ ಆತನನ್ನು ತುಖಿಕ ಹಾಗೂ ಒನೇಸಿಮನ

ಜೊತೆಯಲ್ಲಿ ಕಳುಹಿಸಲಿಲ್ಲ ಎಂಬುದು ತಿಳಿದು ಬರುತ್ತದೆ.

**ನಿಮ್ಮ ಊರಿನ** ಎಂಬುದು ಕೊಲೊಸ್ಸೆಯು ಎಪಫ್ರನ ಸ್ವಂತ ಊರಾಗಿತ್ತು ಅಥವಾ ಆತನು ತನ್ನನ್ನು ಆ ಪ್ರಾಂತ್ಯದವನೆಂದು ಅಥವಾ ಕೊಲೊಸ್ಸೆಯಲ್ಲಿನ ಸಭೆಯವನೆಂದು ಪರಿಗಣಿಸಿಕೊಂಡಿದ್ದನೆಂಬುದನ್ನು ಸೂಚಿಸುತ್ತದೆ. ಆತನು ಆ ಪ್ರಾಂತ್ಯದಲ್ಲಿದ್ದ ತನ್ನ ಸಂಬಂಧಿಗಳು, ಸ್ನೇಹಿತರು ಕಾರಣದಿಂದ ಅಥವಾ ವಿಶೇಷ ಆಸಕ್ತಿಯ ಕಾರಣದಿಂದಾಗಿ ಕೊಲೊಸ್ಸೆಯಲ್ಲಿ ಮಾತ್ರವಲ್ಲದೆ ಲವೊದಿಕೀಯ ಮತ್ತು ಹಿರಿಯಾಪೊಲಿಗಳಲ್ಲಿ ಕೆಲಸ ಮಾಡುವದಕ್ಕೆ ಆಯ್ಕೆಮಾಡಿಕೊಂಡಿದ್ದಿರಬಹುದಾಗಿದೆ. ಪೌಲನು ಎಫೆಸದಲ್ಲಿದ್ದ ವೇಳೆಯಲ್ಲಿ, ಎಪಫ್ರನು ಆ ಪ್ರಾಂತ್ಯದವನೆಂಬ ಕಾರಣಕ್ಕಾಗಿ ಆತನನ್ನು ಕೊಲೊಸ್ಸೆಯಲ್ಲಿ ಸುವಾರ್ತೆ ಸೇವೆ ಮಾಡುವದಕ್ಕಾಗಿ ಕಳುಹಿಸಿ ಕೊಟ್ಟಿರಬಹುದಾಗಿದೆ. ಆತನಿಗೆ ಸ್ವಾಭಾವಿಕವಾಗಿಯೇ ಆ ಕ್ಷೇತ್ರದ ಬಗ್ಗೆ ಒಂದು ವಿಶೇಷ ಆಸಕ್ತಿಯಿರುವದಾಗಿದೆ.

## "ಕ್ರಿಸ್ತ ಯೇಸುವಿನ ದಾಸನಾಗಿರುವ . . . ನಿಮಗೆ ವಂದನೆಗಳನ್ನು ಹೇಳುತ್ತಾನೆ; ಇವನು ಪ್ರಾರ್ಥನೆ ಮಾಡುವಾಗಲೆಲ್ಲಾ ನಿಮಗೋಸ್ಕರ ಹೋರಾಡಿ" (4:12)

ಪೌಲನು ತನ್ನ ಪತ್ರಿಕೆಗಳಲ್ಲಿ **ಕ್ರಿಸ್ತ ಯೇಸುವಿನ ದಾಸನು** ಎಂಬ ಪದವನ್ನು ಕೇವಲ ಎಪಫ್ರ, ತಿಮೊಥೆ, ಮತ್ತು ತನಗೆ ಮಾತ್ರವೇ ಅನ್ವಯಿಸುತ್ತಾನೆ (ರೋಮಾ 1:1; ಗಲಾತ್ಯ 1:10; ಫಿಲಿಪ್ಪಿ 1:1; ತೀತನಿಗೆ 1:1). ಪೌಲನು ಆತನನ್ನು ಈ ವಿಧದಲ್ಲಿ ಗೌರವಿಸುವ ಮೂಲಕವಾಗಿ ಆತನ ಮೇಲೆ ತನಗಿದ್ದ ಆದರಭಿಮಾನವನ್ನು ತೋರಿಸಿದನು. ಅಲ್ಲದೆ ಆತನು ಎಪಫ್ರನ ಕುರಿತಾಗಿ ಆತನು "ಜೊತೆಯ ದಾಸನು" ಎಂದು ಸಹ ಕರೆದನು (1:7; 4:7), ಆತನನ್ನು ತನ್ನೊಂದಿಗೆ ಯೇಸುವಿನ ಸೇವಕನೆಂಬ ಸಮಾನ ದರ್ಜೆಯಲ್ಲಿ ಇಟ್ಟನು. "ಸೇವಕ" ಮತ್ತು "ದಾಸನು" ಎಂಬವುಗಳು ಕೀಳಾದ ಪದಗಳೆಂದು ತೋರಬಹುದು, ಆದರೆ ಪೌಲನು ಅವುಗಳನ್ನು ಆ ವಿಧದಲ್ಲಿ ಬಳಸಲಿಲ್ಲ. ಆತನು ಯೇಸುವಿನ ದಾಸ ಮತ್ತು ಸೇವಕನಾಗಿರುವದನ್ನು ಸಾಧ್ಯವಾದ ಅತ್ಯಂಥ ಉನ್ನತ ಗೌರವವೆಂದು ಎಣಿಸಿದ್ದನು.

ನಂತರ, ಎಪಫ್ರನು **ಪ್ರಾರ್ಥನೆ ಮಾಡುವಾಗೆಲ್ಲಾ ನಿಮಗೋಸ್ಕರ ಹೋರಾಡಿ** [**ಆಸಕ್ತಿಯಿಂದ ಪ್ರಯಾಸ ಪಡುತ್ತಾನೆ**] ಎಂದು ಪೌಲನು ಹೇಳಿದನು. "ಆಸಕ್ತಿಯಿಂದ ಪ್ರಯಾಸ ಪಡು" (ἀγωνιζόμενος, *agōnizomenos*, ಈ ಪದದಿಂದಲೇ "ವೇದನೆ ಪಡು" ಎಂಬದು ಬಂದಿರುತ್ತದೆ), ಎಂಬದರ ಅರ್ಥವು ಯಥಾರ್ಥವಾದ ಪ್ರಯತ್ನದೊಂದಿಗೆ ಕೂಡಿದ ಅವಸರ ಎಂದಾಗಿರುತ್ತದೆ.[4] ಗೆತ್ಸೇಮನೆ ತೋಟದಲ್ಲಿ ಯೇಸುವಿನ "ಮನೋವ್ಯಥೆ"ಯನ್ನು ಈ ಪದದ ನಾಮಪದ ರೂಪದಿಂದ ಲೂಕನು ಬಣ್ಣಿಸುತ್ತಾನೆ (ಲೂಕ 22:44), ಅಲ್ಲದೆ ಪೌಲನು ಸಹ ಅದೇ ರೀತಿಯಲ್ಲಿ ಕೊಲೊಸ್ಸೆಯವರಿಗೋಸ್ಕರವಾದ ತನ್ನ ಹೋರಾಟವನ್ನು ಕುರಿತು ಹೇಳುವಾಗ ಬಳಸಿದನು (2:1). ಆತನು ತನ್ನ ಸಂಗಡ ದೇವರಿಗೆ ಪ್ರಾರ್ಥನೆ ಮಾಡುವದರಲ್ಲಿ ಹೋರಾಟದೊಂದಿಗೆ ಪ್ರಾರ್ಥಿಸುವಂತೆ ಕೇಳಿಕೊಳ್ಳುವಾಗ ಈ ಪದದ ಕ್ರಿಯಾಪದ ರೂಪವನ್ನು ಬಳಸಿದನು (ರೋಮಾ 15:30). ಈ ಪದಗುಚ್ಛವು ಇಲ್ಲಿ ಎಪಫ್ರನ ಪ್ರಾರ್ಥನೆಗಳನ್ನು ಅತ್ಯಾಸಕ್ತಿಯ ಪ್ರಾರ್ಥನೆಗಳಾಗಿದ್ದವೆಂದು ವ್ಯಕ್ತಪಡಿಸುತ್ತದೆ. ಆತನು ಆಸಕ್ತಿಯಿಂದ ಮಾತ್ರವೇ ಪ್ರಾರ್ಥಿಸುತ್ತಿರಲಿಲ್ಲ, ಆದರೆ ನಿರಂತರವಾಗಿ ("ಯಾವಾಗಲೂ") ಸಹ ಪ್ರಾರ್ಥಿಸುತ್ತಿದ್ದನು.

**"ನೀವು ಪ್ರವೀಣರಾಗಿಯೂ ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತದ ಕುರಿತು ಪೂರ್ಣನಿಶ್ಚಯವುಳ್ಳವರಾಗಿಯೂ ನಿಂತಿರಬೇಕೆಂದು ವಿಜ್ಞಾಪನೆ ಮಾಡುತ್ತಾನೆ" (4:12)**

ಎಪಫ್ರನು ತನ್ನ ಸಹೋದರರು **ಪ್ರವೀಣರಾಗಿ ನಿಂತಿರಬೇಕೆಂದು** ಪ್ರಾರ್ಥಿಸಿದನು. "ನಿಂತಿರಬೇಕು" (σταθῆτε, *stathēte*, ಇದು ἵστημι, *histēmi* ಎಂಬದರಿಂದ ಬಂದದ್ದು), ಎಂಬುದು ಶಾರೀರಿಕ ಅರ್ಥದಲ್ಲಿ, ಒಂದು ಸ್ಥಾನದಲ್ಲಿ "ನೀತಿರುವದು" ಎಂಬರ್ಥವನ್ನು ಕೊಡುತ್ತದೆ. ಆತ್ಮೀಕ ಅರ್ಥದಲ್ಲಿ, ಇದು ದೃಢವಾಗಿರುವದು ಅಥವಾ ಒಂದು ಮನವರಿಕೆಯನ್ನು ಹೊಂದಿರುವದು, ಅಚಲವಾಗಿ ಮತ್ತು ಕದಲದೆ ಇರುವದು ಎಂದಾಗಿರುತ್ತದೆ.[5] ಕೊಲೊಸ್ಸೆಯವರು ನಂಬಿಗಸ್ತರಾಗಿ ಉಳಿಯಬೇಕು ಮತ್ತು ದಾರಿ ತಪ್ಪಿಸಿ ಪ್ರಾಪಂಚಿಕ ಮೂಲತತ್ವಗಳಲ್ಲಿ ಅಥವಾ ಸಂಪ್ರದಾಯಗಳೊಳಗೆ ನಡಿಸಲ್ಪಡದಂತೆ ಇರಬೇಕೆಂದು ಎಪಫ್ರನು ಪ್ರಾರ್ಥಿಸಿದನು.

"ನಿಂತಿರಬೇಕು," ಎಂಬುದು ಒಂದು ಕರ್ಮಣಿ ಪ್ರಯೋಗವಾಗಿದ್ದು, ಈ ಕ್ರೈಸ್ತರನ್ನ ಪರಿಪೂರ್ಣರಾಗಿ ನಿಲ್ಲುವಂತೆ *ಮಾಡಲ್ಪಡಬೇಕು* ಎಂದು ಎಪಫ್ರನು ಪ್ರಾರ್ಥಿಸಿದನು ಎಂಬುದನ್ನು ಸೂಚಿಸುತ್ತದೆ. ಅವರು ಹೇಗೆ ನಿಲ್ಲುವಂತೆ ಮಾಡಲ್ಪಡುವರು ಎಂಬುದನ್ನು ಪೌಲನು ವಿವರಿಸಲಿಲ್ಲ. ಕೆಲವರು ಅಭಿಪ್ರಾಯ ಪಡುವದೇನೆಂದರೆ ನಿಲ್ಲುವಿಕೆಯು ದೈವಿಕ ಸಹಾಯದಿಂದ ಮಾತ್ರವೇ ಬರುವಂತೆ ಎಪಫ್ರನು ಪ್ರಾರ್ಥಿಸುತ್ತಿದ್ದನು ಎಂಬದೆ. ದೈವಿಕ ಸಹಾಯವು ಪವಿತ್ರಾತ್ಮನ ಮೂಲಕ ಕೊಡಲ್ಪಡುತ್ತದೆ (ಎಫೆಸ 3:16), ಅದು ಸಹಕಾರವುಳ್ಳ ಮಾನವ ಪರಿಶ್ರಮವಿಲ್ಲದೆ ಬರಲಾರದು. ಎಫೆಸದವರಿಗೆ ನಿಲ್ಲಬೇಕೆಂದು ಆಜ್ಞಾಪಿಸಲಾಗಿರುತ್ತದೆ, ಅದು ಅವರ ಕಡೆಯಿಂದ ಪರಿಶ್ರಮ ಅಗತ್ಯವೆಂಬುದನ್ನು ಸೂಚಿಸುತ್ತದೆ (ಎಫೆಸ 6:13, 14).

"ಪ್ರವೀಣರಾಗಿ" ಅಥವಾ ಪರಿಪೂರ್ಣರಾಗಿ (τέλειοι, *teleioi*) ಎಂಬುದು ಕುಂದಿಲ್ಲದೆ ಎಂಬುದಕ್ಕಿಂತಲೂ ಸಂಪೂರ್ಣತೆ ಮತ್ತು ಪರಿಪಕ್ವತೆಯನ್ನು ವ್ಯಕ್ತಪಡಿಸುತ್ತದೆ. NASB ಯಲ್ಲಿ ಗ್ರೀಕ್ ಪದವು ಹನ್ನೆರಡು ಸಾರಿ "ಪರಿಪೂರ್ಣ" ಎಂದು ಅನುವಾದಿಸಲ್ಪಟ್ಟಿದ್ದು, ಅದರಲ್ಲಿ ಏಳು ಪದಗಳು ಉತ್ತಮ ಅನುವಾದವಾಗಿದ್ದು "ಪರಿಪಕ್ವ" ಅಥವಾ "ಪೂರ್ಣವಾಗಿ ಬೆಳೆದ" ಎಂಬದಾಗಿರುತ್ತವೆ, ಯಾಕೆಂದರೆ ಅವುಗಳು ಕ್ರೈಸ್ತ ಗುಣಗಳನ್ನು ಬೆಳೆಸಿಕೊಳ್ಳುವ ಸನ್ನಿವೇಶದಲ್ಲಿ ಕಾಣಿಸಿಕೊಳ್ಳುತ್ತವೆ (ಮತ್ತಾಯ 5:48; ಫಿಲಿಪ್ಪಿ 3:15; 3:12; ಯಾಕೋಬ 1:4; 3:2; 1 ಯೋಹಾನ 4:18). ನಾಲ್ಕು ಸಾರಿ ವಾಕ್ಯದಲ್ಲಿ ಅಥವಾ ದೇವರಲ್ಲಿ ಸಿಕ್ಕುವ ಮತ್ತು ಒದಗಿಸಲ್ಪಡುವ ಪರಿಪೂರ್ಣತೆಯ ಸಂಬಂಧದಲ್ಲಿ ಕಾಣಿಸಿಕೊಂಡಿರುತ್ತವೆ (ರೋಮಾ 12:2; 1 ಕೊರಿಂಥ 13:10; ಯಾಕೋಬ 1:17, 25), ಮತ್ತು ಒಂದು ಸಾರಿ ಸಂಪೂರ್ಣವಾಗಿರುವ ಪರಲೋಕದ ಗುಡಾರವನ್ನು ಸೂಚಿಸಿ ಬಳಸಲಾಗಿರುತ್ತದೆ (ಇಬ್ರಿಯ 9:11). ಬೇರೆ ವಾಕ್ಯಭಾಗಗಳಲ್ಲಿ *teleios* ಪದದ ಇತರ ರೂಪಗಳನ್ನು NASB ಯು "ಪರಿಪಕ್ವ" (1 ಕೊರಿಂಥ 2:6; 14:20; ಎಫೆಸ 4:13; ಇಬ್ರಿಯ 5:14) ಅಥವಾ "ಸಂಪೂರ್ಣ" (ಮತ್ತಾಯ 19:21; ಕೊಲೊಸ್ಸೆ 1:28) ಎಂದು ಅನುವಾದಿಸಿರುತ್ತದೆ.

ಯಾವನೂ ಪಾಪರಹಿತನಲ್ಲ (ರೋಮಾ 3:9, 10, 23). ಸಂಪೂರ್ಣ ಪಾಪರಹಿತತೆ ಎಂಬ ಅರ್ಥದಲ್ಲಿ ದೇವತ್ವವು ಮಾತ್ರವೇ ಪರಿಪೂರ್ಣ ಮತ್ತು ನಿಷ್ಕಳಂಕ ಆಗಿರುವದು

(ಮತ್ತಾಯ 19:17). ಮೇಲ್ಗಡೆ ಕೊಡಲಾಗಿರುವ ವಾಕ್ಯಭಾಗಗಳು ಕ್ರೈಸ್ತರು ಅಧಿಕಾಧಿಕವಾಗಿ ತಮ್ಮಲ್ಲಿ ಹೊಂದಿಕೊಳ್ಳಬೇಕಾದ ಗುಣಗಳನ್ನು ಬಣ್ಣಿಸುತ್ತವೆ. ಈ ಕಾರಣಕ್ಕಾಗಿ, *teleios* ಎಂಬ ಪದವು ಪರಿಪೂರ್ಣ ಎಂದು ಅನುವಾದಿಸಲ್ಪಡಕೂಡದು ಆದರೆ ಬದಲಾಗಿ "ಪರಿಪಕ್ವ" ಅಥವಾ "ಪೂರ್ಣವಾಗಿ ಬೆಳೆದವರು" ಎಂದು ಅನುವಾದಿಸಲ್ಪಡಬೇಕು. ಕೊಲೊಸ್ಸೆಯ ಸಮುದಾಯದಲ್ಲಿ ಪರಿಪಕ್ವತೆ ಬರಬೇಕೆಂದು ಎಪಫ್ರನ ಪ್ರಾರ್ಥನೆಗಳು ಪ್ರಯೋಜನಕರವಾಗಿ ಇರುವವಾದರೂ, ಕುಂದಿಲ್ಲದ ಪರಿಪೂರ್ಣತೆಗಾಗಿ ಪ್ರಾರ್ಥಿಸುವದು ನಿಷ್ಫಲವಾದದ್ದಾಗುವದು. ಈ ಜೀವನದಲ್ಲಿ ತಪ್ಪು ಮಾಡುವದರಲ್ಲಿ ಪಾಪರಹಿತತೆಯನ್ನು ಯಾವನಿಂದಲೂ ಸಾಧಿಸಿಕೊಳ್ಳಲಾಗದು (1 ಯೋಹಾನ 1:8, 10). ಯೇಸು ಮಾತ್ರವೇ ಪಾಪ ಮಾಡದವನಾಗಿ ಜೀವಿಸಿದನು (2 ಕೊರಿಂಥ 5:21; ಇಬ್ರಿಯ 4:15; 7:26).

ಅದರ ಜೊತೆಗೆ, ಕೊಲೊಸ್ಸೆಯವರು ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತವನ್ನು ಕುರಿತು **ಪೂರ್ಣನಿಶ್ಚಯವುಳ್ಳವರಾಗಿ** (πληροφορέω, *plērophoreō*) ಇರುವಂತಾಗ ಬೇಕೆಂದು ಎಪಫ್ರನು ಪ್ರಾರ್ಥಿಸಿದನು. ಸಂಪೂರ್ಣವಾಚಿ ಕಾಲರೂಪದಲ್ಲಿರುವ ಈ ಕ್ರಿಯಾಪದವು, ಈ ಮುಂಚೆ ಪೂರ್ಣಗೊಂಡು ನಿರಂತರವಾದ ಫಲಿತ ಹೊಂದಿರುವ ಗತಕಾಲದ ಕ್ರಿಯೆಯನ್ನು ವ್ಯಕ್ತಗೊಳಿಸುತ್ತದೆ. ಅವರು ಸಂದೇಶದ ಸತ್ಯದ ಮನವರಿಕೆಯನ್ನು ಹೊಂದಿದ್ದರೆಂಬುದನ್ನು ತಿಳಿದಿದ್ದ ಎಪಫ್ರನು ಅದರಲ್ಲಿ ಅವರು ಪೂರ್ಣನಿಶ್ಚಯವುಳ್ಳವರಾಗಿ ನಿಲ್ಲಬೇಕೆಂದು ಅಪೇಕ್ಷಿಸಿದನು.

**ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತವನ್ನು** ಎಂದು ಹೇಳುವ ಮೂಲಕ, ಪೌಲನ ತಾತ್ಪರ್ಯವು ದೇವರು ಬಯಸುವಂಥ ಯಾವದೊಂದನ್ನು ಹೊರಗಿಡದಂತೆ ಎಂಬದಾಗಿತ್ತು. ಅವರು ಆತನ ಚಿತ್ತಕ್ಕೆ ಹೆಚ್ಚಿನದ್ದನ್ನು ಕೂಡಿಸಿದ್ದರೆ ಅಥವಾ ಅದರಿಂದ ಕಡಿತಗೊಳಿಸಿದ್ದರೆ, ಅವರು "ಎಲ್ಲಾ ವಿಷಯಗಳಲ್ಲಿ" ಆತನ ಚಿತ್ತವನ್ನು ಮಾಡುವವರಾಗುತ್ತಿರಲಿಲ್ಲ. ಯೇಸು ತನ್ನ ಅಪೊಸ್ತಲರಿಗೆ ದೀಕ್ಷಾಸ್ನಾನ ಮಾಡಿಸಿಕೊಂಡು ಶಿಷ್ಯರಾದವರಿಗೆ ತಾನು ಆಜ್ಞಾಪಿಸಿದ್ದನ್ನೆಲ್ಲಾ ಉಪದೇಶಿಸಬೇಕೆಂದು ಆಜ್ಞೆ ನೀಡಿದ್ದನು (ಮತ್ತಾಯ 28:19, 20). ದೇವರು ಪ್ರಕಟಗೊಳಿಸಿರುವಂಥದಕ್ಕೆ ಏನನ್ನೂ ಹೆಚ್ಚಾಗಿ ಕೂಡಿಸದೆ ಅಥವಾ ಅದರೊಳಗಿಂದ ಏನನ್ನೂ ಕಡಿತಗೊಳಿಸಿದ್ದಲ್ಲಿ ಒಬ್ಬ ವ್ಯಕ್ತಿಯು "ಎಲ್ಲಾ ವಿಷಯಗಳಲ್ಲಿ" ದೇವರ ಚಿತ್ತವನ್ನು ಮಾಡುವವನಾಗಿರುತ್ತಾನೆ.

## "ಇವನು ನಿಮಗೋಸ್ಕರವೂ ಲವೊದಿಕೀಯದವರಿಗೋಸ್ಕರವೂ ಹಿರಿಯಾಪೊಲಿಯವರಿಗೋಸ್ಕರವೂ ಬಹಳ ಪ್ರಯಾಸ ಪಡುತ್ತಾನೆಂದು ಸಾಕ್ಷಿಹೇಳುತ್ತೇನೆ" (4:13)

**ಲವೊದಿಕೀಯ ಮತ್ತು ಹಿರಿಯಾಪೊಲಿ**, ಎಂಬ ಎರಡು ಪಟ್ಟಣಗಳು ಲೈಕಸ್ ಕಣಿವೆಯಲ್ಲಿ ನದಿಯ ಎದುರುಬದರು ದಡಗಳಲ್ಲಿ, ಸುಮಾರು ಆರು ಮೈಲುಗಳಷ್ಟು ಅಂತರದಲ್ಲಿದ್ದವು. ಎಪಫ್ರನು ಪೌಲನ ನಿಕಟವಾದ ಸಹಪಾಠಿಯಾಗಿದ್ದನಾದ್ದರಿಂದ ಮತ್ತು ಈ ಸಹೋದರರಿಗೋಸ್ಕರ ಆಗಾಗ ಆತನ ಜೊತೆಯಲ್ಲಿ ಪ್ರಾರ್ಥಿಸುತ್ತಿದ್ದನಾದ್ದರಿಂದ, ಆ ಪಟ್ಟಣದ ಕ್ರೈಸ್ತರ ಬಗ್ಗೆ ಆತನ ಹೃದಯದಲ್ಲಿ ಭಾರವಿತ್ತೆಂಬುದು ಪೌಲನಿಗೆ ಗೊತ್ತಿತ್ತು. ಅವರು ಯೇಸುವಿಗೆ ಅಚಲತೆ ಹಾಗೂ ಸಮರ್ಪಣೆಯನ್ನು ಹೊಂದಿರಬೇಕೆಂದು ಇಚ್ಛಿಸುವವನಾಗಿ, ಅವರಿಗೋಸ್ಕರ ಆತನು ನಿರಂತರವಾಗಿ ಪ್ರಾರ್ಥಿಸುತ್ತಿದ್ದನು.

## “ಪ್ರಿಯ ವೈದ್ಯನಾಗಿರುವ ಲೂಕನು ಮತ್ತು ದೇಮನು ನಿಮಗೆ ವಂದನೆಹೇಳುತ್ತಾರೆ” (4:14)

**ಲೂಕ** ಎಂಬುದು ಲ್ಯಾಟಿನ್ ಹೆಸರಾದ “Lucius” ಎಂಬುದರ ಅಡ್ಡಹೆಸರು ಆಗಿರುತ್ತದೆ. **ಪ್ರಿಯ ವೈದ್ಯನಾಗಿರುವ** ಎಂಬ ಮಾತುಗಳು ಪೌಲನಿಗೆ ಲೂಕನ ಮೇಲೆ ಪ್ರೀತಿಯಿತ್ತು ಎಂಬುದನ್ನು ತೋರಿಸುತ್ತದೆ. “ಪ್ರಿಯ” ಎಂಬುದು ಪೌಲನು ತನಗೆ ಬೇರೆ ಸಂಗಡಿದರ ಮೇಲಿದ್ದ ವಾತ್ಸಲ್ಯವನ್ನು ವರ್ಣಿಸುವದಕ್ಕೆ ಆರಿಸಿಕೊಂಡ ಪ್ರೀತಿ ಸೂಚಿಸುವ ಪದವಾಗಿರುತ್ತದೆ.[6] ಇದು ಒಂದು ಅನ್ಯೋನ್ಯ ಪ್ರೇಮವಾಗಿದ್ದು ಎಲ್ಲರೂ ಪೌಲನನ್ನು ತೊರೆದು ಹೋದಾಗ್ಯೂ ಲೂಕನು ಮಾತ್ರ ಅವನೊಂದಿಗಿರುವದರಲ್ಲಿ ಅದು ಸಾಭಿತಾಗಿರುತ್ತದೆ (2 ತಿಮೊಥೆ 4:11).

ಅಪೊಸ್ತಲರ ಕೃತ್ಯಗಳು 27:28ರ ಪ್ರಕಾರವಾಗಿ, ಲೂಕನು ಹಡಗಿನ ಮುಲಕ ಪೌಲನೊಂದಿಗೆ ರೋಮಾಪುರಕ್ಕೆ ಪ್ರಯಾಣಿಸಿದನು, ಅಲ್ಲಿ ಆತನು ಸೆರೆಮನೆಯಲ್ಲಿರುವ ವೇಳೆ ಆತನೊಂದಿಗೆ ಉಳಿದನು. ಎರಡನೆಯ ಮತ್ತು ಮೂರನೆಯ ಸುವಾರ್ತೆಯ ಕಥನಗಳ ಲೇಖಕರಾದ ಮಾರ್ಕ ಮತ್ತು ಲೂಕ, ಇವರನ್ನು ಒಟ್ಟಿಗೆ ಪೌಲನ ಸಂಗಡ ಇರುವದನ್ನು ಕಾಣುವದು ನಿಜಕ್ಕೂ ಅಸಕ್ತಿಕವಾಗಿರುತ್ತದೆ. ಅವರು ಪರಸ್ಪರ ಮಾಹಿತಿಯನ್ನು ಹಂಚಿಕೊಂಡರೋ? ಅವರು ಆ ಹೊತ್ತಿಗಾಗಲೇ ತಮ್ಮ ಸುವಾರ್ತೆಯ ಕಥನಗಳನ್ನು ಬರೆದಿದ್ದರೋ? ನಮಗೆ ತಿಳಿಯದು.

ಸೆರೆಮನೆಯಲ್ಲಿರುವಾಗ ಬರೆದ ಇನ್ನು ಎರಡು ಪತ್ರಿಕೆಗಳಲ್ಲಿ, ಲೂಕನ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳು ಪುಸ್ತಕದ ಲೇಖಕನಾದ ಲೂಕನ ಬಗ್ಗೆ, ಪೌಲನು ಆತನನ್ನು ತನ್ನ ಸಹಚರರಲ್ಲೊಬ್ಬನು ಎಂಬದಾಗಿ ಹೇಳುತ್ತಾನೆ (2 ತಿಮೊಥೆ 4:11; ಫಿಲೆಮೋನನಿಗೆ 24). ಈ ಪುಸ್ತಕಗಳಲ್ಲಿ ಲೂಕನ ಹೆಸರು ಕಂಡು ಬರುವದಿಲ್ಲವಾದರೂ, ಪೌಲನ ಪತ್ರಿಕೆಗಳನ್ನು ಅಪೊಸ್ತಲರ ಕೃತ್ಯಗಳು ಪುಸ್ತಕದೊಂದಿಗೆ ಹೋಲಿಕೆ ಮಾಡುವ ವೇಳೆ ವಿಸರ್ಜಿಸುವ ಪ್ರಕ್ರಿಯೆಯ ಮೂಲಕ ನೋಡುವದಾದರೆ, ಲೇಖಕನು “ನಾವು” ಮತ್ತು “ನಮ್ಮ”[7] ಎಂದು ಬರೆಯುವ ಸಂದರ್ಭದಲ್ಲಿ ಪೌಲನ ಸಂಗಡ ಲೂಕ ಹಾಗೂ ತೀತನು ಮಾತ್ರವೇ ಇದ್ದಿರಬಹುದಾಗಿದೆ. ಲೂಕನು ಎರಡು ಪುಸ್ತಕಗಳನ್ನು ಬರೆದನೆಂಬುದಕ್ಕಿರುವ ಪುರಾವೆಯೊಳಗೆ ಭಾಷಾಶೈಲಿಯು ಸೇರಿರುತ್ತದೆ, ಅದು ಆತನು ಉತ್ತಮವಾಗಿ ವಿದ್ಯಾವಂತನಾಗಿದ್ದನೆಂಬುದನ್ನು ಪ್ರತಿಬಿಂಬಿಸುತ್ತದೆ, ಮತ್ತು Diognetus, Irenaeus, ಅಲೆಗ್ಝಾಂಡ್ರದ Clement, Tertullian, ಮತ್ತು Eusebius ರಂತಹ ಆದಿ ಲೇಖಕರ ಸಾಕ್ಷಿಯು ಸೇರಿರುತ್ತದೆ.

ಪೌಲನು ಲೂಕನನ್ನು ಒಬ್ಬ “ಪ್ರಿಯ ವೈದ್ಯನು” (4:14) ಎಂದು ಕರೆದನು ಮತ್ತು ತನ್ನ “ಸಹಕಾರಿಗಳಲ್ಲಿ” ಒಬ್ಬನಾಗಿ ಸಹ ಆತನನ್ನು ಮಾರ್ಕ, ಅರಿಸ್ತಾರ್ಕ, ಮತ್ತು ದೇಮರ ಜೊತೆಯಲ್ಲಿ ಪಟ್ಟಿ ಮಾಡಿರುತ್ತಾನೆ (ಫಿಲೆಮೋನನಿಗೆ 24). ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ತನ್ನನ್ನು ಒಬ್ಬ ವೈದ್ಯನೆಂದು ಬಣ್ಣಿಸಿಕೊಳ್ಳುವ ಬದಲಾಗಿ, ಲೂಕನು ತಾನು ಪೌಲ ಹಾಗೂ ಇತರರ ಸಂಗಡ ಸುವಾರ್ತೆಯ ಪ್ರಸಾರಣೆಗೆ ಪ್ರಯಾಸ ಪಡುತ್ತಿದ್ದನೆಂಬುದನ್ನು ಸೂಚಿಸಿದನು. ದೇವರು “[ಅವರನ್ನು] ಸುವಾರ್ತೆಯನ್ನು ಸಾರುವದಕ್ಕೆ . . . ಕರೆದಿದ್ದಾನೆಂದು” ಲೂಕನು ಬರೆಯುತ್ತಾನೆ (ಅಪೊಸ್ತಲರ ಕೃತ್ಯಗಳು 16:10).

ಅಪೊಸ್ತಲರ ಕೃತ್ಯಗಳಲ್ಲಿ "ನಾವು" ಎಂಬ ವಾಕ್ಯಭಾಗಗಳು ತೋರ್ಪಡಿಸುವದೇನೆಂದರೆ ಪೌಲನ ಎರಡನೆಯ ಸುವಾರ್ತಾ ಪ್ರಯಾಣದ ವೇಳೆ ಲೂಕನು ಪೌಲನೊಂದಿಗಿನ ತನ್ನ ಒಡನಾಟವನ್ನು ತ್ರೋವದಲ್ಲಿ ಆರಂಭಿಸಿದನು ಎಂಬದೆ. ಆತನು ತ್ರೋವದಲ್ಲಿ ಪೌಲನೊಂದಿಗೆ ಸೇರಿಕೊಂಡಾಗ ಬಹುಶಃ ಆತನೊಬ್ಬ ಕ್ರೈಸ್ತನಾಗಿದ್ದಿರುವ ಸಾಧ್ಯತೆಯು ಬಹಳಷ್ಟಿರುತ್ತದೆ, ಯಾಕೆಂದರೆ ಸುವಾರ್ತೆಯನ್ನು ಸಾರುವದಕ್ಕೆ ಮಕೆದೋನ್ಯಕ್ಕೆ ಹೋಗಬೇಕೆಂಬ ಕರೆಯುವಿಕೆಯಲ್ಲಿ ಆತನು ತನ್ನನ್ನು ಸೇರ್ಪಡೆಗೊಳಿಸಿಕೊಂಡನು (ಅಪೊಸ್ತಲರ ಕೃತ್ಯಗಳು 16:10). ಪೌಲನಿಗೆ ವೈದ್ಯಕೀಯ ಆರೈಕೆಯು ಅಗತ್ಯವಾಗಿದ್ದರಿಂದಾಗಿ ಪೌಲನು ಆತನನ್ನು ಸಂಪರ್ಕಿಸಿದನೆಂದು ಕೆಲವರು ಊಹಿಸಿಕೊಳ್ಳುತ್ತಾರೆ. ಪೌಲನು ಆತನೊಂದಿಗಿನ ತನ್ನ ಸಹವಾಸದ ಮೂಲಕ ಆತನನ್ನು ಕ್ರಿಸ್ತನ ಬಳಿಗೆ ಕರೆತಂದ ಬಳಿಕ, ಆತನು ಪೌಲನ ವೈದ್ಯಕೀಯ ಅಗತ್ಯತೆಗಳನ್ನು ನೋಡಿಕೊಳ್ಳಲು ಪೌಲನೊಂದಿಗೆ ನಿರಂತರವಾಗಿ ಪ್ರಯಾಣವನ್ನು ಮಾಡುತ್ತಿದ್ದನು ಎಂಬುದು ಅವರ ಕಲ್ಪನೆಯಾಗಿರುತ್ತದೆ. ಇದು ಒಂದು ಊಹಾಕಲ್ಪನೆಯಾಗಿದೆ ಮತ್ತು ನಿಶ್ಚಯತೆಯೊಂದಿಗೆ ಒಪ್ಪಿಕೊಳ್ಳುವದಕ್ಕೆ ಸಾಧ್ಯವಿಲ್ಲದ್ದಾಗಿದೆ.

ಪೌಲ ಹಾಗೂ ಆತನ ಇತರ ಸಂಗಡಿಗರೊಂದಿಗೆ, ಲೂಕನು ತ್ರೋವದಿಂದ ಫಿಲಿಪ್ಪಿಗೆ ಪ್ರಯಾಣಿಸಿದನು. ಅಲ್ಲಿ, ಮಾರುಕಟ್ಟೆಯಲ್ಲಿ, ಆತನು ಯಾರೋ ಒಬ್ಬ ದಾಸಿಯಾದ ಹುಡುಗಿಯನ್ನು ಎದುರ್ಗೊಂಡನು, ಆಕೆಯು ಅತನನ್ನು (ಮಾತ್ರವಲ್ಲದೆ ಪೌಲ, ಸೀಲ, ಮತ್ತು ತಿಮೊಥೆಯರನ್ನು ಸಹ) ಎಡೆಬಿಡದೆ ಹಿಂಬಾಲಿಸುತ್ತಾ, "ಈ ಮನುಷ್ಯರು ಪರಾತ್ಪರನಾದ ದೇವರ ದಾಸರು; ನಿಮಗೆ ರಕ್ಷಣೆಯ ಮಾರ್ಗವನ್ನು ಸಾರುತ್ತಾರೆ" ಎಂದು ಕೂಗುತ್ತಿದ್ದಳು (ಅಪೊಸ್ತಲರ ಕೃತ್ಯಗಳು 16:17). ಆಕೆಯ ಪ್ರತಿಕ್ರಿಯೆಯು ತೋರಿಸುವದೇನೆಂದರೆ ಆತನು ಮತ್ತು ಇತರರು ಸೇರಿಕೊಂಡು ಯೇಸುವಿನ ಹೆಸರಿನಲ್ಲಿ ಸಿಕ್ಕುವ ರಕ್ಷಣೆಯನ್ನು ಸಾರುತ್ತಿದ್ದರು ಎಂಬದೆ. ಪೌಲ, ಸೀಲ, ಮತ್ತು ತಿಮೊಥೆಯರು ಹೊರಟು ಹೋದ ಬಳಿಕ, ಲೂಕನು ಫಿಲಿಪ್ಪಿಯಲ್ಲಿಯೇ ಪೌಲನು ಮೂರನೆಯ ಸುವಾರ್ತಾ ಪ್ರಯಾಣದಲ್ಲಿ ಹಿಂದಿರುಗಿ ಬರುವ ತನಕ ಉಳಿದುಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 16:10-17; 20:5-15). ಅಲ್ಲಿಂದ, ಆತನು ಪೌಲನ ಸಂಗಡ ಯೆರೂಸಲೇಮಿಗೆ (ಅಪೊಸ್ತಲರ ಕೃತ್ಯಗಳು 21:1-18) ಮತ್ತು ನಂತರ ರೋಮಾಪುರಕ್ಕೆ ಪ್ರಯಾಣವನ್ನು ಮುಂದುವರೆಸಿದನು, ಅಲ್ಲಿ ಆತನು ಎರಡು ವರ್ಷಗಳ ಕಾಲ ಪೌಲನೊಂದಿಗೆ ಇದ್ದನು (ಅಪೊಸ್ತಲರ ಕೃತ್ಯಗಳು 27:1-28:16).

ಲೂಕನು ತೀತನನ್ನು ಪೌಲನ ಸಹಚರರಲ್ಲೊಬ್ಬನೆಂದು ಸೇರ್ಪಡೆಗೊಳಿಸಲಿಲ್ಲ ಎಂಬ ವಾಸ್ತವಾಂಶದ ಆಧಾರದ ಮೇಲೆ, ತೀತನು ಲೂಕನ ಸಹೋದರನಾಗಿದ್ದನೆಂಬದಾಗಿ ಕೆಲವರು ಭಾವಿಸಿಕೊಳ್ಳುತ್ತಾರೆ. ತೀತನು ಮೂರನೆಯ ಸುವಾರ್ತಾ ಪ್ರಯಾಣದಲ್ಲಿ ಪೌಲನ ಸಂಗಡವಿದ್ದನೆಂಬುದು ಪೌಲನ ಪತ್ರಿಕೆಗಳಿಂದ ಸಾಭಿತಾಗುತ್ತದೆ (ನೋಡಿರಿ 2 ಕೊರಿಂಥ 2:13; 7:6; ಗಲಾತ್ಯ 2:1-3). ಇದು ನಿಜವಾಗಿರುವದಾದರೆ, ಅದಕ್ಕೆ ಲೂಕನ ನಮ್ರತೆಯೇ ಕಾರಣವೆಂದು ಹೇಳಬಹುದು, ಏನೆಂದರೆ ಆತನು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ತನ್ನ ಅಥವಾ ತೀತನ ಹೆಸರನ್ನಾಗಲಿ ಉಲ್ಲೇಖಿಸಲಿಲ್ಲ.

ಬಹುಶಃ ಲೂಕನು ಇತರ ಅನ್ಯಜನಾಂಗದವರ ಜೊತೆಯಲ್ಲಿ ಪಟ್ಟಿ ಮಾಡಲ್ಪಟ್ಟಿರುವದು ಸಹ ಆತನೊಬ್ಬ ಅನ್ಯಜನಾಂಗದವನು ಎಂಬುದನ್ನು ತೋರಿಸುತ್ತದೆ. Origenನು

ಈತನನ್ನು ಅಷ್ಟಾಗಿ ಪರಿಚಿತನಲ್ಲದ ಲೂಕ್ಯನೆಂದು ಗುರುತಿಸುತ್ತಾನೆ, ಈತನನ್ನೇ ಪೌಲನು ರೋಮಾ 16:21ರಲ್ಲಿ ನನ್ನ ಸ್ವಜನರಾದ ಎಂದು ಕರೆದನು. ಈತನು ಸಿರಿಯಾದ ಅಂತಿಯೋಕ್ಯದಲ್ಲಿ ಹುಟ್ಟಿದವನಾಗಿದ್ದನೆಂದು Eusebius ಮತ್ತು Jeromeರು ಮುಕ್ತಾಯಕ್ಕೆ ಬರುತ್ತಾರೆ.[8] ಅದು ನಿಜವಾಗಿದ್ದಲ್ಲಿ, ಕೆಲವರು ಹೇಳಿರುವ ಪ್ರಕಾರ, ಈತನು ಅಪೊಸ್ತಲರ ಕೃತ್ಯಗಳು 13:1ರಲ್ಲಿನ ಕುರೇನ್ಯದ ಲೂಕ್ಯನು ಆಗಿರಬಹುದಾಗಿದೆ. ವೈದ್ಯನ ಹಾಗೂ ಈ ಇಬ್ಬರು ವ್ಯಕ್ತಿಗಳ ನಡುವೆ ಖಚಿತವಾದ ಸಂಬಂಧವು ಕಂಡು ಬರುವದಿಲ್ಲ. ಇನ್ನೊಂದು ಊಹೆ ಏನೆಂದರೆ ಈತನು ಥೆಯೊಫಿಲನ ಮನೆಯಲ್ಲಿ ಸೇವೆ ಮಾಡುತ್ತಿದ್ದನು, ಈತನು ಒಬ್ಬ ಐಶ್ವರ್ಯವಂತನಾದ ಸರ್ಕಾರಿ ಅಧಿಕಾರಿಯಾಗಿದ್ದು ಆತನಿಗೇ ಲೂಕನು ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳ ಪುಸ್ತಕ ಬರೆದನು (ಲೂಕ 1:3; ಅಪೊಸ್ತಲರ ಕೃತ್ಯಗಳು 1:1). ಸಂಪ್ರದಾಯ ಪ್ರಕಾರವಾಗಿ, ಪೌಲನ ಮರಣದ ನಂತರದಲ್ಲಿ ಲೂಕನು ದಲ್ಮಾತ್ಯ, ಗೌಲ, ಇಟಲಿ, ಮತ್ತು ಮಕೆದೋನ್ಯಗಳಲ್ಲಿ ಬೋಧಕನಾಗಿದ್ದನು; ಮತ್ತು ಆತನು ಮೊದಲ ಶತಮಾನದ ಅಂತ್ಯದ ಹತ್ತಿರದಲ್ಲಿ ಆಖಾಯ ಅಥವಾ ಬಿಥೂನ್ಯದಲ್ಲಿ ಮರಣಿಸಿದನು.[9]

**ದೇಮ**ನ ಹೆಸರು ಕೊಲೊಸ್ಸೆಯವರಿಗೆ ಮತ್ತು ಫಿಲೆಮೋನನಿಗೆ ಬರೆದ ಪತ್ರಿಕೆಗಳಲ್ಲಿ ಲೂಕನ ಹೆಸರಿನ ಜೊತೆಯಲ್ಲಿ ಕಾಣಿಸಿಕೊಳ್ಳುತ್ತದೆ. ಪೌಲನು ಕಡೆಯ ಬಾರಿಗೆ ಈ ಜೊತೆಗೆಲಸದವರ ಬಗ್ಗೆ ಬರೆಯುವ ವೇಳೆ, ದೇಮನು ಪೌಲನನ್ನು ತೊರೆದು ಥೆಸಲೋನಿಕಕ್ಕೆ ಹೋದರೆ ಲೂಕನು ಮಾತ್ರ ಪೌಲನ – ಸೆರೆಮನೆಯಲ್ಲಿದ್ದ – ಸಂಗಡ ಉಳಿದುಕೊಂಡಿದ್ದನು (2 ತಿಮೊಥೆ 4:10, 11). “ದೇಮ” ಎಂಬ ಹೆಸರು “ದೇಮೇತ್ರಿಯ” ಎಂಬುದರ ಸಂಕ್ಷಿಪ್ತರೂಪ ಆಗಿದ್ದು, ಇದು ಕೆಲವರು ಆತನನ್ನು 3 ಯೋಹಾನ 12ರಲ್ಲಿ ಯೋಹಾನನು ಹೆಸರಿಸಿದ ವ್ಯಕ್ತಿಯೊಂದಿಗೆ ಗುರುತಿಸುವದಕ್ಕೆ ಕಾರಣವಾಗಿರುತ್ತದೆ. ಪೌಲನ ಬೇರೆಯವರಿಗೆ ಶಿಫಾರಸ್ಸು ನೀಡಿದಂತೆ ಈತನಿಗೆ ಶಿಫಾರಸ್ಸು ನೀಡದೆಯೇ ಗುರುತಿಸುವದು ಕೊಲೊಸ್ಸೆಯವರಿಗೆ ಆತನ ಒಡನಾಟವಿತ್ತೆಂಬುದನ್ನು ಸೂಚ್ಯಾರ್ಥಗೊಳಿಸಬಹುದಾಗಿದೆ. ಇನ್ನೊಂದೆಡೆಯಲ್ಲಿ, ಪೌಲನು ಆತನಲ್ಲಿ ಉನ್ನತವಾಗಿ ಪ್ರಶಂಸಿಸಬಹುದಾದ ಅಥವಾ ಶಿಫಾರಸ್ಸು ಮಾಡಬಹುದಾದ ಯಾವದನ್ನು ಕಾಣಲಿಲ್ಲ ಎಂಬ ಕಾರಣಕ್ಕೆ ಏನನ್ನೂ ಹೇಳದೆ ಇದ್ದಿರಬಹುದಾಗಿದೆ. 2 ತಿಮೊಥೆಯನಿಗೆ ಪತ್ರಿಕೆಯಲ್ಲಿ, ಇಹಲೋಕದ ಮೇಲಿನ ಪ್ರೀತಿಯ ಕಾರಣದಿಂದ ತನ್ನನ್ನು ಬಿಟ್ಟು ಥೆಸಲೋನಿಕಕ್ಕೆ ಹೋದನೆಂಬದಾಗಿ ಆತನ ವಿಷಯದಲ್ಲಿ ಪೌಲನು ಹೇಳುತ್ತಾನೆ (4:10). ಬಹುಶಃ, ಪೌಲನು ಮೊದಲೇ ಆತನಲ್ಲಿ ಅಸ್ಥಿರತೆಯನ್ನು ಗುರುತಿಸಿದ್ದು ಅನಂತರದಲ್ಲಿ ಅದು ಸ್ಪಷ್ಟವಾಗಿ ತೋರಿ ಬಂದಿರಬಹುದಾಗಿದೆ.

## ಸಹೋದರರಿಗೆ ವಂದನೆಗಳು ಮತ್ತು ಹೇಳಿಕೆಗಳು (4:15-17)

**15ಲವೊದಿಕೀಯದಲ್ಲಿರುವ ಸಹೋದರರಿಗೂ ನುಂಫಳಿಗೂ ಆಕೆಯ ಮನೆಯಲ್ಲಿ ಕೂಡುವ ಸಭೆಯವರಿಗೂ ವಂದನೆ ಹೇಳಿರಿ.**

**16ನಿಮ್ಮಲ್ಲಿ ಈ ಪತ್ರಿಕೆಯನ್ನು ಓದಿಸಿಕೊಂಡ ತರುವಾಯ ಲವೊದಿಕೀಯದವರ ಸಭೆಯಲ್ಲಿಯೂ ಓದಿಸಿರಿ; ಮತ್ತು ನಾನು ಬರೆದ ಪತ್ರಿಕೆಯನ್ನು ಲವೊದಿಕೀಯದಿಂದ ತರಿಸಿ ನೀವೂ ಓದಿಕೊಳ್ಳಿರಿ. 17ಅರ್ಖಿಪ್ಪನಿಗೆ – ನೀನು ಕರ್ತನಿಂದ ಹೊಂದಿರುವ ಸೇವೆಯನ್ನು ನೆರವೇರಿಸುವದಕ್ಕೆ ಎಚ್ಚರವಾಗಿರಬೇಕೆಂದು ಹೇಳಿರಿ.**

### “ಲವೊದಿಕೀಯದಲ್ಲಿರುವ ಸಹೋದದರರಿಗೂ . . .
### ವಂದನೆ ಹೇಳಿರಿ” (4:15)

ಲವೊದಿಕೀಯದವರಿಗೆ ವಂದನೆ ಹೇಳುವದು ಮತ್ತು ಪೌಲನ ಪತ್ರವನ್ನು ಅವರೊಂದಿಗೆ ಹಂಚಿಕೊಳ್ಳುವದು ಕೊಲೊಸ್ಸೆಯವರಿಗೆ ಯಾವದೇ ಕಷ್ಟವನ್ನುಂಟು ಮಾಡುತ್ತಿರಲಿಲ್ಲ ಯಾಕೆಂದರೆ ಅವರ ಎರಡೂ ಪಟ್ಟಣಗಳ ನಡುವೆ ಕೇವಲ ಹತ್ತು ಮೈಲುಗಳಷ್ಟು ಅಂತರವಿತ್ತಷ್ಟೆ. ಪೌಲನಿಗೆ **ಲವೊದಿಕೀಯ**ದಲ್ಲಿ ಅನೇಕರ ಪರಿಚಯವಿಲ್ಲದೆ ಇರಬಹುದಾದರೂ, ಆತನಿಗೆ ಆ ಸಭೆಯಲ್ಲಿನ ಕೆಲವು ಸದಸ್ಯರ ಪರಿಚಯವಂತೂ ಇತ್ತು. ಆತನು ನುಂಫಳನ್ನು ಆಕೆಯ ಹೆಸರಿನಿಂದ ಬಲ್ಲವನಾಗಿದ್ದನು. ಪೌಲನು ಎಫೆಸದಲ್ಲಿ ಮೂರು ವರ್ಷಗಳ ಕಾಲ ಉಳಿದುಕೊಂಡ ವೇಳೆಯಲ್ಲಿ ಲವೊದಿಕೀಯದಿಂದ ಕೆಲವರು ಹೋಗಿ ಆತನನ್ನು ಭೇಟಿ ಮಾಡಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 20:31).

**ಸಹೋದದರರಿಗೆ** (ἀδελφοί, *adelphoi*) ಎಂಬುದು ಒಂದು ಪುಲ್ಲಿಂಗ ಪದವಾದಾಗ್ಯೂ, ಈ ಸಂದರ್ಭದಲ್ಲಿ ಬಹುಶಃ ಪುರುಷರು ಹಾಗೂ ಸ್ತ್ರೀಯರನ್ನು ಒಳಗೊಂಡದ್ದಾಗಿರುವದು. ಪೌಲನು ἀδελφαί (*adelphai*) ಎಂಬ ಸ್ತ್ರೀಲಿಂಗ ಪದವನ್ನು ಸೇರ್ಪಡೆಗೊಳಿಸುವ ಮೂಲಕ “ಸಹೋದರರು ಹಾಗೂ ಸಹೋದರಿಯರು” ಎಂದು ಬರೆದಿರಬಹುದಿತ್ತು. ಹೇಗೂ, ಇಲ್ಲಿ *adelphoi* ಎಂಬುದು ಮಾತ್ರವೇ ಕಾಣಿಸಿಕೊಳ್ಳುವದರಿಂದ ಜಾತಿವಿಶಿಷ್ಟ ಅರ್ಥದಲ್ಲಿ ಪೌಲನು “ಸಹೋದರರು” ಎಂದು ಹೇಳಿದಾಗ್ಯೂ ತಮ್ಮನ್ನು ಸಹ ಸೇರ್ಪಡೆಗೊಳಿಸಿ ಹೇಳುತ್ತಿದ್ದಾನೆಂದು ಸಹೋದರಿಯರು ಖಂಡಿತವಾಗಿಯೂ ಭಾವಿಸಿಕೊಂಡಿದ್ದರು.

ಒಂದು ಸಭೆಯು ಇನ್ನೊಂದು ಸಭೆಗೆ **ವಂದನೆ ಹೇಳಬೇಕೆಂದು** ಅಪ್ಪಣೆ ಕೊಟ್ಟ ನಿದರ್ಶನವು ಹೊಸ ಒಡಂಬಡಿಕೆಯಲ್ಲಿ ಇದೊಂದೇ ಆಗಿರುತ್ತದೆ. ಈ ವಂದನೆಗಳನ್ನು ಅವರಿಗೆ ಹೇಗೆ ತಿಳಿಸಬೇಕು, ಒಂದು ಪತ್ರದ ಮೂಲಕವೋ ಅಥವಾ ಒಬ್ಬ ಸಂದೇಶವಾಹಕನು ಖುದ್ದಾಗಿ ಅಲ್ಲಿಗೆ ಹೋಗಿ ತಿಳಿಸಬೇಕೋ, ವೈಯಕ್ತಿವಾಗಿಯೋ ಅಥವಾ ಸಾರ್ವಜನಿಕವಾದ ಕೂಟದಲ್ಲಿ ತಿಳಿಸಬೇಕೋ ಎಂಬ ಬಗ್ಗೆ ಪೌಲನು ಯಾವದೇ ಸಲಹಾಸೂಚನೆಗಳನ್ನು ನೀಡಲಿಲ್ಲ. ಅಲ್ಲದೆ ಯಾರೂ ವಂದನೆಗಳನ್ನು ತಲುಪಿಸಬೇಕೆಂಬುದನ್ನೂ ಆತನು ಹೇಳಲಿಲ್ಲ: ಪತ್ರಿಕೆಯನ್ನು ಓದಿದವನೋ, ಸಭೆಯಲ್ಲಿನ ಒಬ್ಬ ವಾಚಕನೋ, ಅಥವಾ ಬೇರೆ ಯಾವದೇ ವ್ಯಕ್ತಿಯಾದರೋ. ಪೌಲನು **ಲವೊದಿಕೀಯ**ದವರಿಗೆ ವಂದನೆ ಹೇಳಿರಿ ಎಂಬದಾಗಿ ಕೊಲೊಸ್ಸೆಯವರಿಗೆ ಹೇಳುತ್ತಿದ್ದಾನೆ, ಅವಶ್ಯಕವಾಗಿ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯನ್ನು ಅವರ ಮುಂದೆ ಓದಬೇಕೆಂದಲ್ಲ. ಲವೊದಿಕೀಯದಲ್ಲಿನ ಸಹೋದರರಿಗೆ ವಂದನೆ ಹೇಳಿರಿ ಎಂದು ಪೌಲನು ಕೊಲೊಸ್ಸೆಯವರಿಗೆ ಹೇಳಿದ್ದರ ಮೂಲಕ ತಿಳಿಯುವದೇನೆಂದರೆ ಎರಡು ಸಭೆಗಳ ನಡುವೆ ಮತ್ತು ಬಹುಶಃ ಇನ್ನು ಕೆಲವು ವಿಶ್ವಾಸಿಗಳ ಸಭೆಗಳೊಂದಿಗೆ ಪರಸ್ಪರ ಸಂಬಂಧ ಇತ್ತು ಎಂಬದೆ. ಈ ಎರಡು ಸಭೆಗಳವರಂತೂ ಒಬ್ಬರಿಗೊಬ್ಬರು ಅನ್ಯೋನ್ಯತೆಯನ್ನು ಇಟ್ಟುಕೊಳ್ಳುವಷ್ಟು ನಿಕಟವಾಗಿದ್ದರೆಂಬದು ನಿಶ್ಚಯವಾದದ್ದು.

### “ನುಂಫಳಿಗೂ ಆಕೆಯ ಮನೆಯಲ್ಲಿ ಕೂಡುವ ಸಭೆಯವರಿಗೂ” (4:15)

**ಸಭೆ** (ἐκκλησία, *ekklēsia*) ಎಂಬುದಕ್ಕೆ ವಿವಿಧ ಅರ್ಥನಿರೂಪಣೆಗಳಿರಬಹುದಾದರೂ, ಇಲ್ಲಿ ಅದು ಒಂದು ಸ್ಥಳೀಯ ಸಭೆ ಎಂದು ಅರ್ಥವಾಗಿರುತ್ತದೆ ಹೊರತು

ಒಟ್ಟಾರೆಯಾದ ಕ್ರಿಸ್ತನ ದೇಹ ಎಂದರ್ಥವಾಗಿರುವದಿಲ್ಲ.

ಸಭೆಗಳು ಹಲವಾರು ಸಾರಿ ಖಾಸಗಿ ಮನೆಗಳಲ್ಲಿ ಕೂಡಿ ಬರುತ್ತಿತ್ತು (ಅಪೊಸ್ತಲರ ಕೃತ್ಯಗಳು 12:12), ವಿಶೇಷವಾಗಿ ಜನರ ದೊಡ್ಡ ಗುಂಪು ಕೂತುಕೊಳ್ಳಬಹುದಾದಷ್ಟು ಬೃಹತ್ ಕೋಣೆಗಳನ್ನು ಹೊಂದಿರುತ್ತಿದ್ದ ಶ್ರೀಮಂತರಾದ ಸದಸ್ಯರ ಮನೆಗಳಲ್ಲಿ ಕೂಡುತ್ತಿದ್ದರು. ಮೊದಲ ಎರಡು ಶತಮಾನಗಳ ಕಾಲ, ಇದು ಕ್ರೈಸ್ತರಿಗೆ ಕೂಡಿ ಬರುವದಕ್ಕೆ ಸಾಮಾನ್ಯವಾದ ಸ್ಥಳವಾಗಿತ್ತು. ಪೌಲನು ಬೇರೆ ಕ್ರೈಸ್ತರ ಮನೆಗಳಲ್ಲಿ ಕೂಡಿ ಬರುತ್ತಿದ್ದ ಸಭೆಗಳನ್ನು ಹೆಸರಿಸುತ್ತಾನೆ (ರೋಮಾ 16:5, 23; 1 ಕೊರಿಂಥ 16:19; ಫಿಲೆಮೋನನಿಗೆ 2).

**ನುಂಫಳು** (ಅಥವಾ ಸಂಭಾವ್ಯವಾಗಿ "ನುಂಫನು") ಹೆಸರಿನ ಲಿಂಗವನ್ನು ವಾಕ್ಯಭಾಗದಲ್ಲಿ ಇರುವ ಅದರ ದ್ವಿತೀಯಾವಿಭಕ್ತಿಯ ರೂಪದಿಂದ ನಿರ್ಧರಿಸುವದಕ್ಕೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಸರ್ವನಾಮವು ಯಾವ ಲಿಂಗವನ್ನು ಸೂಚಿಸಿ ಹೇಳಲಾಗಿರುತ್ತದೆಂಬುದನ್ನು ನಿರ್ಧರಿಸುತ್ತದೆ. ಉತ್ತಮ ಹಸ್ತ ಪ್ರತಿಗಳು "ಆತನ ಮನೆಯಲ್ಲಿ" ಎಂಬದಕ್ಕಿಂತಲೂ **ಆಕೆಯ ಮನೆಯಲ್ಲಿ** ಎಂಬದಕ್ಕೆ ಒಲವು ತೋರಿಸುತ್ತವೆಯಾದರೂ, ತರ್ಜುಮೆಗಳು ಬಗೆ ಬಗೆಯಾಗಿರುತ್ತವೆ. NIV, TNIV, 1977ರ NASB ಮತ್ತು NASB ತರ್ಜುಮೆಗಳು "ಆಕೆಯ" ಎಂದು ಹೇಳುತ್ತವೆ; ಆದರೆ NASBಯಲ್ಲಿ ಈ ಅಡಿಟಿಪ್ಪಣಿ ಇರುತ್ತದೆ: "ಅಥವಾ *ನುಂಫನು* (ಪು[ಲ್ಲಿಂಗ])." ಅದು KJV ಮತ್ತು NKJV ತರ್ಜುಮೆಗಳಲ್ಲಿ "ಆತನ" ಎಂದು ಅನುವಾದಿಸಲ್ಪಟ್ಟಿರುತ್ತದೆ. ASV ತರ್ಜುಮೆಯಲ್ಲಿ "ಅವರ" ಎಂದಿರುತ್ತದೆ. ನಂತರದ ತಲೆಮಾರುಗಳವರು ಒಬ್ಬ ಸ್ತ್ರೀಯು ಸ್ವಂತವಾಗಿ ಮನೆಯನ್ನು ಹೊಂದಿರುವದಾಗಿ ಹೇಳಿರುವ ಸಾಧ್ಯತೆಯನ್ನು ಪ್ರಶ್ನಿಸಿದ ಕಾರಣದಿಂದಾಗಿ "ಆತನ" ಎಂದು ಬದಲಾವಣೆ ಮಾಡಲಾಗಿರುತ್ತದೆಂಬದಾಗಿ ಕೆಲವು ವ್ಯಾಖ್ಯಾನಕಾರರು ಕಲ್ಪನೆ ಮಾಡಿಕೊಂಡಿರುತ್ತಾರೆ; ಹೇಗೂ, ಇದೊಂದು ಸಮಂಜಸವಾದ ವಿವರಣೆಯಾಗಿರಲಾರದು. ಮಾರ್ಕನೆನಿಸಿಕೊಳ್ಳುವ ಯೋಹಾನನ ತಾಯಿಯಾದ ಮರಿಯಳಿಗೆ ಯೆರೂಸಲೇಮಿನಲ್ಲಿ ಸ್ವಂತ ಮನೆಯಿತ್ತು (ಅಪೊಸ್ತಲರ ಕೃತ್ಯಗಳು 12:12), ಮತ್ತು ಲುದ್ಯಳು ಪೌಲ ಹಾಗೂ ಆತನ ಸಂಗಡಿಗರಿಗೆ ಹೀಗೆ ಬಲವಂತ ಮಾಡಿದಳು, "ನನ್ನ ಮನೆಯಲ್ಲಿ ಬಂದು ಇರ್ರಿ" (ಅಪೊಸ್ತಲರ ಕೃತ್ಯಗಳು 16:15), ಇದು ಸ್ತ್ರೀಯರಿಗೆ ಸ್ವಂತ ಮನೆಗಳಿದ್ದವು ಎಂಬದನ್ನು ಸೂಚಿಸುತ್ತದೆ. ನುಂಫನು ಎಂಬುದು ಪುಲ್ಲಿಂಗದ ಹೆಸರಾದ Nymphodorus ಎಂಬದರ ಸಂಕ್ಷಿಪ್ತ ರೂಪವಾಗಿದೆ ಮತ್ತು ಆ ಮನೆಯು ಪುರುಷನಿಗೆ ಸೇರಿತ್ತೆಂಬದಾಗಿ ಸಹ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿರುತ್ತದೆ. ಹೇಗೂ ಹಸ್ತ ಪ್ರತಿಗಳಲ್ಲಿ ಪುರಾವೆಯ ಮಹತ್ವಪೂರ್ಣತೆಯು "ಆಕೆಯ ಮನೆಯಲ್ಲಿ" ಎಂಬುದು ಸರಿಯಾದ ಬಿರುದು ಎಂಬದನ್ನು ತೋರಿಸಿ ಕೊಡುತ್ತದೆ.

ಪೌಲನು ಬಹುಶಃ ನುಂಫಳನ್ನು ವೈಯಕ್ತಿಕವಾಗಿ ಬಲ್ಲವನಾಗಿದ್ದನು. ಕನಿಷ್ಠ ನುಂಫಳನ್ನು ಹೆಸರು ಹೇಳಿ ಸೂಚಿಸಿದ್ದರಿಂದ ಆತನು ಆಕೆಯನ್ನು ಭೇಟಿಯಾಗಿದ್ದನು ಅಥವಾ ಯಾರಾದರೊಬ್ಬರಿಂದ, ಬಹುಶಃ ಎಪಫ್ರನಿಂದ, ಆಕೆಯ ಕುರಿತಾದ ವರದಿಯನ್ನು ಪಡೆದುಕೊಂಡಿದ್ದನೆಂಬುದನ್ನು ಸೂಚಿಸುತ್ತದೆ. ಪೌಲನು ಸ್ತ್ರೀಯರ ಹೆಸರುಗಳನ್ನು ಉಲ್ಲೇಖಿಸುವದು ಅಸಹಜವೇನೂ ಆಗಿರಲಿಲ್ಲ, ಯಾಕೆಂದರೆ ಬೇರೆ ಪತ್ರಿಕೆಗಳಲ್ಲಿ ಸಹ ಆತನು ಸ್ತ್ರೀಯರನ್ನು ಸೇರ್ಪಡೆಗೊಳಿಸಿರುತ್ತಾನೆ (ನೋಡಿರಿ ರೋಮಾ 16:3, 6; 1 ಕೊರಿಂಥ 16:19; ಫಿಲಿಪ್ಪಿ 4:2, 3).

ನುಂಫಳು ವಾಸಿಸಿದ ಪಟ್ಟಣವನ್ನು ಖಚಿತವಾಗಿ ನಿರ್ಧರಿಸುವದಕ್ಕಾಗುವದಿಲ್ಲ. ಪೌಲನು ಲವೊದಿಕೀಯದಲ್ಲಿನ ಸಭೆಗೆ ವಂದನೆ ಹೇಳಿದ ತಕ್ಷಣದಲ್ಲೇ ಆಕೆಯ ಹೆಸರನ್ನು ಉಲ್ಲೇಖಿಸಿರುವದರಿಂದ, ಕೆಲವರು ಇದೇ ಆಕೆಯ ಕುಟುಂಬ ಸಭೆಯಾಗಿತ್ತೆಂದು ಭಾವಿಸಿಕೊಂಡಿರುತ್ತಾರೆ. ಪತ್ರಿಕೆಯನ್ನು ಸ್ವೀಕರಿಸಿಕೊಂಡವರಿಗೆ ಆಕೆಯು ಎಲ್ಲಿ ವಾಸಿಸುತ್ತಾಳೆಂಬುದು ಗೊತ್ತಿದ್ದಿರಬಹುದಾಗಿದೆ.

## "ನಿಮ್ಮಲ್ಲಿ ಈ ಪತ್ರಿಕೆಯನ್ನು ಓದಿಸಿಕೊಂಡ ತರುವಾಯ ಲವೊದಿಕೀಯದವರ ಸಭೆಯಲ್ಲಿಯೂ ಓದಿಸಿರಿ" (4:16)

**ಓದಿಸಿಕೊಂಡ** (ἀναγινώσκω, *anaginōskō*) ಎಂಬುದು ಓದುವದಕ್ಕೆ ಎಂಬುದನ್ನು ಸೂಚಿಸಲು ಬಳಸುವ ಸಾಮಾನ್ಯವಾದ ಪದವಾಗಿರುತ್ತದೆ. *Anagnōsis* ಸಾರ್ವಜನಿಕ ಓದುವಿಕೆಯನ್ನು ಸೂಚಿಸುವದಾಗಿದ್ದು, ಇದು ಹೊಸ ಒಡಂಬಡಿಕೆಯಲ್ಲಿ ಮೂರು ಸಾರಿ ಮಾತ್ರವೇ ಕಾಣಿಸಿಕೊಳ್ಳುತ್ತದೆ (ಅಪೊಸ್ತಲರ ಕೃತ್ಯಗಳು 13:15; 2 ಕೊರಿಂಥ 3:14; 1 ತಿಮೊಥೆ 4:13). ಪೌಲನ ಪತ್ರಿಕೆಗಳು ಸಭೆಗಳಲ್ಲಿ ಸುತ್ತೋಲೆಯಂತೆ ವಿತರಿಸಲ್ಪಡುವದಕ್ಕಾಗಿ ಬರೆಯಲ್ಪಟ್ಟವುಗಳಾಗಿದ್ದವು, ಮತ್ತು ಈ ದಿನಗಳಲ್ಲೂ ಅವುಗಳು ಅಧ್ಯಯನ ಮಾಡತಕ್ಕ ಮತ್ತು ಗೌರವಿಸತಕ್ಕವುಗಳಾಗಿವೆ. ಆತನು **ನಿಮ್ಮಲ್ಲಿ** ಎಂದು ಹೇಳಿರುವದು ತೋರಿಸುವದೇನೆಂದರೆ ತನ್ನ ಪತ್ರಿಕೆಗಳು ಓದಲ್ಪಡುವದನ್ನು ಕೇಳಿಸಿಕೊಳ್ಳುವ ಅವಕಾಶವು ಸಭೆಯಲ್ಲಿನ ಪ್ರತಿಯೊಬ್ಬರಿಗೂ ಸಿಕ್ಕಬೇಕೆಂಬುದು ಆತನ ಅಪೇಕ್ಷೆಯಾಗಿತ್ತು ಎಂಬುದೆ (ನೋಡಿರಿ 1 ಥೆಸಲೋನಿಕ 5:27).

ಪೌಲನು ಕೊಲೊಸ್ಸೆಯಲ್ಲಿನ ಸಭೆಯನ್ನಷ್ಟೆ ಅಲ್ಲದೆ ಇನ್ನು ದೊಡ್ಡದಾದ ಶ್ರೋತೃಗಳನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನು, ಯಾಕೆಂದರೆ ಆತನು ಲವೊದಿಕೀಯದಲ್ಲಿ ತನ್ನ ಪತ್ರಿಕೆಯು ಓದಲ್ಪಡಬೇಕೆಂದು ಬೇಡಿಕೊಂಡನು. ಅಲ್ಲದೆ ಲವೊದಿಕೀಯದಿಂದ ಬರಲಿದ್ದ ಪತ್ರಿಕೆಯು ಕೊಲೊಸ್ಸೆಯವರಿಗೆ ಸಹ ಓದಿಸಲ್ಪಡಬೇಕೆಂದು ಆತನು ಇಚ್ಛೆಸಿದನು, ಇದು ಎರಡೂ ಸಭೆಗಳು ಒಂದೇ ವಿಧವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದವೆಂಬುದನ್ನು ಸೂಚಿಸುತ್ತದೆ. ಸಭಿಕರ ಕೂಟದಲ್ಲಿ ಈ ಪತ್ರಿಕೆಯನ್ನು ಯಾರು ಓದಬೇಕೆಂಬುದನ್ನು ಆತನು ನಿರ್ದಿಷ್ಟವಾಗಿ ಹೇಳಲಿಲ್ಲ. ಸ್ಪಷ್ಟವಾಗಿ ತೋರುವ ಪ್ರಕಾರ, ಪತ್ರಿಕೆಯನ್ನು ಯಾರು ಓದಬೇಕು ಹಾಗೂ ಅದನ್ನು ಹೇಗೆ ಮಾಡಬೇಕು ಎಂಬದು ಕೊಲೊಸ್ಸೆಯವರ ವಿವೇಚನೆಗೆ ಬಿಟ್ಟ ವಿಚಾರವಾಗಿತ್ತು. ಕೆಲವು ಸಾರಿ ಶಾಸ್ತ್ರಗಳಲ್ಲಿ ಏನು ಮಾಡಬೇಕು ಎಂಬದರ ಬಗ್ಗೆ ಒಂದು ಹೇಳಿಕೆಯನ್ನು ನೀಡಲಾಗಿರುತ್ತದೆ; ಆದರೆ ಅದನ್ನು ಹೇಗೆ, ಯಾವಾಗ, ಮತ್ತು ಎಲ್ಲಿ ಮಾಡಬೇಕೆಂಬುದನ್ನು ಆ ಅಪ್ಪಣೆಗಳನ್ನು ಹೊಂದಿದವರ ವಿವೇಚನೆಗೆ ಬಿಡಲ್ಪಟ್ಟದ್ದು ಎಂಬದಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿರುತ್ತದೆ.

ಪತ್ರಿಕೆಯು ಸಭೆಯು ವಾಡಿಕೆಯಂತೆ ಕೂಡಿ ಬರುತ್ತಿದ್ದ ಕೂಟಗಳೊಂದರಲ್ಲಿ ಓದಲ್ಪಟ್ಟಿತೆಂಬ ಒಂದು ಕಲ್ಪನೆಯನ್ನು ಮಾಡಿಕೊಳ್ಳಬಹುದು, ಅದು ವಾರದ ಮೊದಲ ದಿನವಾಗಿರುವ ಸಾಧ್ಯತೆಯಿರುತ್ತದೆ. ಇದು ಅವರ ವಿಶೇಷ ಕೂಟದ ದಿನವಾಗಿತ್ತು (ಅಪೊಸ್ತರ ಕೃತ್ಯಗಳು 20:7; 1 ಕೊರಿಂಥ 16:2), ಅದು ಕರ್ತನ ದಿನವೆಂದು ಕರೆಯಲಾಗಿರುತ್ತದೆ (ἡ κυριακῇ ἡμέρα, *hē kuriakē hēmera*; ಪ್ರಕಟನೆ 1:10). ಆದಿ ಸಭೆಯವರು ತಮ್ಮ ಭಾನುವಾರದ ಕೂಟಗಳನ್ನು ಸೂಚಿಸುವದಕ್ಕೆ ಈ ಪದವನ್ನು ಬಳಸುತ್ತಿದ್ದರು.

## “ಮತ್ತು ನಾನು ಬರೆದ ಪತ್ರಿಕೆಯನ್ನು ಲವೊದಿಕೀಯದಿಂದ ತರಿಸಿ ನೀವೂ ಓದಿಸಿಕೊಳ್ಳಿರಿ” (4:16)

ಪತ್ರಿಕೆಯನ್ನು **ಲವೊದಿಕೀಯದಿಂದ ತರಿಸಿ** ಎಂದು ಹೇಳಿರುವದು ಉತ್ತರಿಸಲಾಗದಂಥ ಪ್ರಶ್ನೆಗಳನ್ನು ಎಬ್ಬಿಸುತ್ತದೆ. ವಿವಿಧ ಸಾಧ್ಯತೆಗಳ ಕುರಿತು ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ:

1. ಇದು ಪೌಲನು ಲವೊದಿಕೀಯದವರಿಗೆ ಬರೆದಿದ್ದ ಕಳೆದು ಹೋಗಿರುವ ಪತ್ರಿಕೆಯನ್ನು ಸೂಚಿಸುತ್ತದೆ ಎಂದು ಕೆಲವರು ಯೋಚಿಸುತ್ತಾರೆ. ಇದರ ಆಧಾರದಲ್ಲಿ, ಮಾರ್ಮೊನ್ನರು ಬೈಬಲಿನಿಂದ ಅನೇಕ ಸರಳವಾದ ಹಾಗೂ ಅಮೂಲ್ಯವಾದ ಸಂಗತಿಗಳು ಕಾಣೆಯಾಗಿರುತ್ತವೆ ಎಂಬದಾಗಿ ವಾದಿಸುತ್ತಾರೆ. ಲವೊದಿಕೀಯದವರಿಗೆ ಬರೆದ ಪತ್ರಿಕೆಯೆಂದು ಅಭಿಪ್ರಾಯವುಂಟು ಮಾಡುವ ಪತ್ರಿಕೆಯೊಂದು ನಾಲ್ಕನೆಯ ಶತಮಾನದಲ್ಲಿ ಹೊತ್ತಿನಲ್ಲಿ ಕಾಣಿಸಿಕೊಂಡಿತ್ತು:

> Jerome[10]. . . ಮತ್ತು ಕೆಲವು ಗ್ರೀಕ್ ಪಿತೃಗಳು ಒಂದು ನಕಲಿ ಲವೊದಿಕೀಯ ಪತ್ರಿಕೆಯ ಬಗ್ಗೆ ಲಘುವಾಗಿ ಮಾತಾಡುತ್ತಾರೆ, ಮತ್ತು Niceaದಲ್ಲಿ ನಡೆದ ಎರಡನೆಯ ಸಮಾಲೋಚನಾ ಸಭೆಯು ಅದನ್ನು ತಿರಸ್ಕರಿಸುತ್ತದೆ (ಕ್ರಿ.ಶ. 787). ಹೇಗೂ, ಅನೇಕ ಲ್ಯಾಟಿನ್ [ಹಸ್ತಪ್ರತಿಗಳು], 6ನೇ ಶತಮಾನದಲ್ಲಿ Codex Fuldensis ನೊಂದಿಗೆ ಆರಂಭಗೊಂಡು ಮಧ್ಯ ಯುಗಗಳ ವರಗೂ ಮುಂವರೆದವುಗಳಾಗಿದ್ದು, ಅವುಗಳಲ್ಲಿ ಲವೊದಿಕೀಯದವರಿಗೆ ಬರೆದ ಒಂದು ಪತ್ರಿಕೆಯು ಸೇರಿರುತ್ತದೆ: ಪೌಲನು ಬಳಸಿದ ಪದಗುಚ್ಛಗಳ ಒಂದು ಹುರುಳಿಲ್ಲದ ಮತ್ತು ನಿರ್ವಿಕಾರವಾದ ಸಂಗ್ರಹ, ಮುಖ್ಯವಾಗಿ ಫಿಲಿಪ್ಪಿಯವರಿಗೆ ಪತ್ರಿಕೆಯಿಂದ ಕದ್ದು ಬಳಸಿರುವಂತದ್ದು, ಬೇರೆ ಯಾವ ಉದ್ದೇಶವು ಅಲ್ಲದೆ ಕೇವಲ ಕೊಲೊಸ್ಸೆ 4:16ರನ್ನು ಭರ್ತಿಮಾಡಬೇಕೆಂಬುದಕ್ಕಾಗಿಯೇ ಆಗಿರುತ್ತದೆ. ಅದರಲ್ಲಿ ಗ್ರೀಕ್ ಭಾಷೆಯಿಂದ ಅನುವಾದಿಸಲ್ಪಟ್ಟಿರುವ ಕುರುಹುಗಳಿರುತ್ತವೆ; ಒಂದು ಅರಬಿಕ್ ಆವೃತ್ತಿಯು ಸಹ ಅಭಿಪ್ರಾಯವನ್ನುಂಟು ಮಾಡುತ್ತದೆ. ಅದು 4ನೆ ಶತಮಾನಕ್ಕಿಂತಲೂ ನಂತರದ್ದಾಗಿರುವದಕ್ಕೆ ಸಾಧ್ಯವಿಲ್ಲ, ಆದರೆ ಇದು Muratorian Canonನಲ್ಲಿ ಖಂಡಿಸಲ್ಪಟ್ಟಿರುವ ಪತ್ರಿಕೆಯಾಗಿರುವ ಸಾಧ್ಯತೆಯು ಇರುವದಿಲ್ಲ.[11]

2. ಇನ್ನೊಂದು ಯೋಚನೆಯು ಏನೆಂದರೆ ಅದು ಪೌಲನು ಒಂದು ಅಪರಿಚಿತವಾದ ಸಭೆಗೆ ಬರೆದಿದ್ದ ಪತ್ರಿಕೆಯಾಗಿತ್ತು ಎಂಬದೆ, ಆದರೆ ಈ ಅಭಿಪ್ರಾಯವನ್ನು ಹೊಂದಿರುವವರು ಬಹಳ ಕಡಿಮೆ. ಪುನಃ, ಅಂಥ ಪತ್ರಿಕೆಯೊಂದು ಇದ್ದಿದ್ದೇ ಆದಲ್ಲಿ, ಅದು ಕಳೆದು ಹೋಗಿರುತ್ತದೆ.

3. ಪೌಲನು ಲವೊದಿಕೀಯದಲ್ಲಿರುವವರಿಗೆ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಏಕೆ ವಂದನೆ ಹೇಳಿದನೆಂಬುದನ್ನು ವಿವರಿಸುವ ಉದ್ದೇಶಕ್ಕಾಗಿ, ಲವೊದಿಕೀಯದವರಿಗೆ ಪತ್ರಿಕೆಯನ್ನು ಎಪಫ್ರನು ಬರೆದನೆಂದು ಅಭಿಪ್ರಾಯವನ್ನು ಸೂಚಿಸಲಾಗಿರುತ್ತದೆ. ಪೌಲನು ಅದನ್ನು ಬರೆದಿಲ್ಲವಾದರೆ, ಬಹುಶಃ ಇದು ಎಪಫ್ರನಿಗೆ ತನ್ನ ವಂದನೆಗಳನ್ನು ಅವರಿಗೆ ತಿಳಿಸಲು ಸಿಕ್ಕ ಮೊದಲ ಸಂದರ್ಭವಾಗಿರುತ್ತದೆ. ಈ ವಿವರಣೆಯು ಪೌಲನು ಲವೊದಿಕೀಯ ಪತ್ರಿಕೆಯನ್ನು “ನಾನು ಬರೆದ” ಎಂದು ಕರೆದನೆಂಬ ಅಂಶವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲವೆಂದು ತೋರುತ್ತದೆ (4:16).

4. Chrysostom, Mopsuestisಗೆ ಸೇರಿದ Theodore, ಮತ್ತು Theodoretರಂತಹ ಪ್ರಾಚೀನ ಬರಹಗಾರರು ಇದು ಲವೊದಿಕೀಯದವರು ಪೌಲನಿಗೆ ಬರೆದ ಪತ್ರಿಕೆಯೆಂದು ನಂಬಿದ್ದರು. ಇದು ಮೇಲುನೋಟಕ್ಕೆ ಸರಿಯೆಂದು ತೋರುವದಾಗಿದೆ: ಪತ್ರಿಕೆಯು ಆತನಿಗೆ ಬಂದು ಸೇರದೆ ಇದ್ದಿರುವಾಗ ಪೌಲನು ಹೇಗೆ ಆ ಪತ್ರಿಕೆಯ ಬಗ್ಗೆ ತಿಳಿದಿರುವದಕ್ಕೆ ಸಾಧ್ಯ?

ಆತನಿಗೆ ಬರೆಯಲ್ಪಟ್ಟ ಪತ್ರಿಕೆಯೊಂದು ಏಕೆ ಕೊಲೊಸ್ಸೆಯವರಿಗೆ ಓದಲ್ಪಡಬೇಕು? ಲವೊದಿಕೀಯ ಸಭೆಯರಿಂದ ಬರೆಯಲ್ಪಟ್ಟ ಒಂದು ಪತ್ರಿಕೆಗೆ ಪೌಲನಿಂದ ಬರೆಯಲ್ಪಟ್ಟ ಪತ್ರಿಕೆಗಿರುವ ಅದೇ ಅಧಿಕಾರವು ಇರುವದಿಲ್ಲ. ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯು ಲವೊದಿಕೀಯದಲ್ಲಿ ಓದಿಸಲ್ಪಡಬೇಕೆಂದು ಆತನು ಅಪೇಕ್ಷಿಸುವದು ತೋರಿಸುವದೇನೆಂದರೆ ಅದು ಆತನ ಅಪೊಸ್ತಲಿಕ ಅಧಿಕಾರವುಳ್ಳದ್ದೆಂದು ಆತನು ಪರಿಗಣಿಸಿದ್ದನು ಎಂಬದೆ.

5. ಕೆಲವು ವೇದಪಂಡಿತರು ನಂಬುವದೇನೆಂದರೆ ಇದು ಲವೊದಿಕೀಯದವರಿಗೆ ಹೋಗಿ ತಲುಪಿದ್ದ ಎಫೆಸದವರಿಗೆ, ಫಿಲೆಮೋನನಿಗೆ, ಅಥವಾ ಇಬ್ರಿಯರಿಗೆ ಬರೆದ ಪತ್ರಿಕೆಯ ಒಂದು ನಕಲು ಪ್ರತಿಯಾಗಿತ್ತು ಎಂಬದೆ. ಇದರಲ್ಲಿ ಪೌಲನು ಫಿಲೆಮೋನನಿಗೆ ಬರೆದ ಪತ್ರಿಕೆಯು ತಳ್ಳಿ ಹಾಕಲ್ಪಡುತ್ತದೆ, ಯಾಕೆಂದರೆ ಅದು ಕೊಲೊಸ್ಸೆಯವರಿಗೆ ಯಾವದೇ ವಿಧದಲ್ಲಿ ಪ್ರಾಮುಖ್ಯವಾಗಿರದಂಥ ಕೇವಲ ವೈಯಕ್ತಿಕ ವಿಚಾರಗಳನ್ನು ಕುರಿತು ಮಾತಾಡುವದಾಗಿರುತ್ತದೆ. ಅದು ಇಬ್ರಿಯರಿಗೆ ಬರೆದ ಪತ್ರಿಕೆಯಾಗಿತ್ತೆಂಬುದನ್ನು ನಂಬುವ ವೇದ ಪಂಡಿತರು ಕಡಿಮೆಯಾಗಿರುತ್ತಾರೆ, ಯಾಕೆಂದರೆ ಅದು ಪೌಲನಿಂದ ಬರೆಯಲ್ಪಟ್ಟಿತೆಂಬುದನ್ನು ಅವರು ಸಂಶಯಿಸುತ್ತಾರೆ ಮತ್ತು ಧರ್ಮಶಾಸ್ತ್ರಕ್ಕಿಂಥ ಯೇಸು ಶ್ರೇಷ್ಠನು ಎಂಬ ಚರ್ಚೆಯನ್ನು ಮಾಡುವದಕ್ಕೆ ಅರ್ಹವಾಗುವಷ್ಟು ಯೆಹೂದಿ ಜನಸಂಖ್ಯೆಯು ಕೊಲೊಸ್ಸೆಯಲ್ಲಿ ಇತ್ತೋ ಅಥವಾ ಇಲ್ಲವೋ ಎಂಬುದನ್ನು ಅವರು ಪ್ರಶ್ನಿಸುವವರಾಗಿದ್ದಾರೆ. ಆ ಪತ್ರಿಕೆಯು ಆತನು ಎಫೆಸದವರಿಗೆ ಬರೆದ ಪತ್ರಿಕೆಯಾಗಿದ್ದಿರಬಹುದಾಗಿದೆ. Marcion[12]ನು ಎಫೆಸದವರಿಗೆ ಪತ್ರಿಕೆಯನ್ನು ಅಜ್ಞಾತಕರ್ತೃಕ ಎಂದು ಪರಿಗಣಿಸಿದ್ದನು, ಇದು ಪೌಲನ ಪತ್ರಿಕೆಯೆಂದು ಭಾವಿಸಿ, ಅದನ್ನು ತನ್ನ ಕ್ಯಾನೊನ್‌ನಲ್ಲಿ "ಲವೊದಿಕೀಯದವರಿಗೆ" ಎಂದು ನಾಮಕರಣ ಮಾಡಿದನು; ಹೇಗೂ, ಈ ಗುರುತಿಸಲ್ಪಟ್ಟ ಪಾಷಂಡಿಯಾದ ಈತನ ಕೃತಿಯನ್ನು ಪ್ರಾಮಾಣೀಕೃತವೆಂದು ಭಾವಿಸಲಿಕ್ಕಾಗದು.

ಎಫೆಸದವರಿಗೆ ಪತ್ರಿಕೆಯು ಕೊಲೊಸ್ಸೆಯವರಿಗೆ ಪತ್ರಿಕೆ ನಂತರದಲ್ಲಿ ಬರೆಯಲ್ಪಟ್ಟಿತೆಂದು ಅವರು ನಿರ್ಣಯಿಸುವದರಿಂದ ಅದು ಎಫೆಸದವರಿಗೆ ಬರೆದ ಪತ್ರಿಕೆಯಾಗಿರಲಿಲ್ಲ ಎಂದು ಇನ್ನು ಕೆಲವರು ವಾದಿಸುತ್ತಾರೆ. ಎಫೆಸದವರಿಗೆ ಪತ್ರಿಕೆಯು ಮೊದಲೇ ಬರೆಯಲ್ಪಟ್ಟಿದ್ದಿರಬಹುದು ಆದರೆ ಪತ್ರಿಕೆಯನ್ನು ಕೊಂಡೊಯ್ಯುವವರಿಲ್ಲದ್ದರಿಂದ ತಕ್ಷಣದಲ್ಲಿ ಕಳುಹಿಸಲ್ಪಡದಿರಬಹುದಾಗಿದೆ. ಎಫೆಸದವರಿಗೆ ಪತ್ರಿಕೆಯು ಆಸ್ಯಸೀಮೆಯಲ್ಲಿ ಎಲ್ಲಾ ಸಭೆಗಳಿಗೆ ಬರೆದಿದ್ದ ಒಂದು ಪತ್ರಿಕೆಯ ಸಂಗಡಿಗ ಪತ್ರಿಕೆಯಾಗಿತ್ತೆಂದು ಅಭಿಪ್ರಾಯ ಪಡುತ್ತಾರೆ ಯಾಕೆಂದರೆ ಅದು "ಎಫೆಸದಲ್ಲಿರುವ ದೇವಜನರಿಗೆ" ಎಂದು ಸಂಬೋದಿಸಲ್ಪಟ್ಟಿರುತ್ತದೆ (ಎಫೆಸ 1:1) ಮತ್ತು ಅದು ಒಂದು ನಿರ್ದಿಷ್ಟವಾದ ಸಭೆಗೆ ಬರೆಯಲ್ಪಟ್ಟಿರಲಿಲ್ಲ ಯಾಕೆಂದರೆ ಕೆಲವು ಹಸ್ತಪ್ರತಿಗಳು *en Ephesō* ("ಎಫೆಸದಲ್ಲಿರುವ") ಎಂಬುದನ್ನು ಸೇರ್ಪಡೆಗೊಳಿಸಿರುವದಿಲ್ಲ. ಅದು ಮಾತ್ರವಲ್ಲದೆ, ಎಫೆಸದವರಿಗೆ ಬರೆದ

ಪತ್ರಿಕೆಯಲ್ಲಿ, ಪೌಲನು ತಾನು ವಾಡಿಕೆಯಂತೆ ಒಂದು ವೈಯಕ್ತಿ ಸಂದೇಶವ ಮತ್ತು ತನ್ನ ಸಹಚರರಿಂದ ವಂದನೆ ಹೇಳುವದನ್ನು ಹಾಗೂ ಅವರ ಕುರಿತಾದ ಪ್ರಶಂಸೆಯ ಹೇಳಿಕೆಗಳನ್ನು ಸೇರ್ಪಡೆಗೊಳಿಸಿರುವದಿಲ್ಲ. ತಾನು ಮೂರು ವರ್ಷಗಳ ಕಾಲ ಎಫೆಸದಲ್ಲಿದ್ದವನಾಗಿ ಪರಿಚಯ ಹೊಂದಿದ್ದ ಎಫೆಸದವರಿಗೆ ವಂದನೆಗಳನ್ನು ಅಥವಾ ಸಲಹಾಸೂಚನೆಗಳನ್ನಾಗಲಿ ತಿಳಿಸದಿರುವದು ಸಹಜವೆಂದು ತೋರುತ್ತದೆ (ಅಪೊಸ್ತಲರ ಕೃತ್ಯಗಳು 20:31). ತಾನು ಎಫೆಸದಲ್ಲಿ ಮಾಡಿದ ಸೇವೆಯ ಮೂಲಕ ಆಸ್ಯಸೀಮೆಯಲ್ಲಿ ಸಂಧಿಸಿದ್ದ ವ್ಯಾಪಕವಾದ ಜನರನ್ನು ಮನಸ್ಸಿನಲ್ಲಿಟ್ಟುಕೊಂಡು ತನ್ನ ಪತ್ರಿಕೆಯನ್ನು ಬರೆದದ್ದರಿಂದ ಆತನು ನಿರ್ದಿಷ್ಟವಾದ ಜನರ ಹೆಸರುಗಳನ್ನು ಬಳಸಲಿಲ್ಲವೆಂದು ತೋರುತ್ತದೆ.

ಎಫೆಸದವರಿಗೆ ಬರೆದ ಪತ್ರಿಕೆಯು "ಲವೊದಿಕೀಯದಿಂದ" ಬರಲಿದ್ದ ಪತ್ರಿಕೆ ಆಗಿರುತ್ತದೆಂಬುದಕ್ಕೆ Herbert M. Carsonನು ಪುರಾವೆಯನ್ನು ಮುಂದಿಡುತ್ತಾನೆ:

> ಇದೊಂದು ಏಕ ಸಭೆಗೆ ಬರೆದಿರುವ ಪತ್ರಿಕೆಯಲ್ಲ ಆದರೆ ವ್ಯಾಪಕವಾದ ವಿತರಣೆಗಾಗಿ ಬರೆಯಲ್ಪಟ್ಟಿತ್ತೆಂಬುದು ಸಾಮಾನ್ಯವಾಗಿ ಒಪ್ಪಿಕೊಳ್ಳಲ್ಪಟ್ಟ ಸಂಗತಿಯಾಗಿದೆ . . . ಪತ್ರಿಕೆಯು ಸ್ಥಳೀಯ ಪರಿಸ್ಥಿತಿಯ ಕುರಿತಾಗಿ ಅಲ್ಲ ಆದರೆ ಒಟ್ಟಾರೆಯಾಗಿ ಸಭೆಗೆ ಪರಿಣಾಮವನ್ನುಂಟು ಮಾಡುವ ಸತ್ಯಗಳ ಬಗ್ಗೆ ಮಾತಾಡುತ್ತದೆ. ಪತ್ರಿಕೆಯ ಒಲೆಕಾರನು ತುಖಿಕನಾಗಿದ್ದು (ಎಫೆಸ 6:21) ಆತನೇ ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯನ್ನು ಸಹ ಕೊಂಡೊಯ್ದನು; ಮತ್ತು ಇದು ಹಾಗೂ ಇವೆರಡು ಪತ್ರಿಕೆಗಳ ನಡುವಿನ ನೆಂಟಸ್ತಿಕೆಯು ಒಟ್ಟಾಗಿ ದೃಢಪಡಿಸುವದೇನೆಂದರೆ ಅವುಗಳು ಒಂದೇ ಸಮಯದಲ್ಲಿ ಬರೆಯಲ್ಪಟ್ಟವು ಮತ್ತು ಒಂದೇ ಸ್ಥಳಕ್ಕೆ ಹೋದವು ಎಂಬುದೆ. ಹಾಗಾದರೆ ಎಫೆಸದವರಿಗೆ ಪತ್ರಿಕೆಯು ಆಸ್ಯಸೀಮೆಯಲ್ಲಿದ್ದ ಸಭೆಗಳಿಗೆ ಕಳುಹಿಸಲ್ಪಟ್ಟಿದ್ದಾಗಿದ್ದಲ್ಲಿ, ಅದು ಬಹಳ ಸಂಭಾವ್ಯವಾಗಿ ಕೊಲೊಸ್ಸೆಗೆ ಕಳುಹಿಸಲ್ಪಡುವದಕ್ಕೆ ಮುಂಚೆ ದೊಡ್ಡ ನಗರವಾದ ಲವೊದಿಕೀಯಕ್ಕೆ ಹೋಗುವದಾಗಿತ್ತು.[13]

ನಾವು ಲವೊದಿಕೀಯವದರಿಗೆ ಬರೆದ ಪತ್ರಿಕೆಗೆ ಏನಾಯಿತೋ ಎಂಬದರ ಬಗ್ಗೆ ಅತಿಯಾಗಿ ಚಿಂತಿತರಾಗುವ ಅಗತ್ಯವಿಲ್ಲ. ಯೇಸು ತನ್ನ ವಾಕ್ಯವು ಎಂದಿಗೂ ಅಳಿದು ಹೋಗುವದಿಲ್ಲ ಎಂದು ವಾಗ್ದಾನ ಮಾಡಿದನು (ಮತ್ತಾಯ 24:35). ನಮ್ಮ ಈಗಿನ ಕ್ಯಾನೊನ್‌ನಲ್ಲಿ ದೇವರು ನಮಗೆ ಅಗತ್ಯವಿರುವದನ್ನೆಲ್ಲಾ ಸಂರಕ್ಷಿಸಿಟ್ಟಿರುತ್ತಾನೆ. ಪೌಲನ ಪತ್ರಿಕೆಗಳು ಸಭೆಗಳೊಳಗೆ ಸುತ್ತಿ ಬರುತ್ತಿದ್ದವು ಎಂಬುದೇ ಪ್ರಾಮುಖ್ಯವಾಗಿರುತ್ತದೆ. ಆತನು ಅಧಿಕಾರದಿಂದ ಬರೆದನು, ತನ್ನ ಪತ್ರಿಕೆಗಳು ಕರ್ತನ ಆಜ್ಞೆಗಳನ್ನು ಒಳಗೊಂಡಿರುವವುಗಳೆಂದು ಸ್ವೀಕರಿಸಿಕೊಳ್ಳಲ್ಪಡಬೇಕೆಂದು ಎದುರು ನೋಡುವವನಾಗಿದ್ದನು (1 ಕೊರಿಂಥ 14:37). ಆದಿ ಸಭೆಯು ಪೌಲನ ಪತ್ರಿಕೆಗಳ ನಕಲು ಪ್ರತಿಗಳನ್ನು ಮಾಡಿಕೊಂಡು ಅವುಗಳನ್ನು ಶಾಸ್ತ್ರಗಳೆಂದು ಅಂಗೀಕರಿಸಿಕೊಂಡಿದ್ದರು ಎಂಬುದಕ್ಕೆ ಸಾಕ್ಷಿಯು ಪೇತ್ರನು ಪೌಲನ ಬರಹಗಳನ್ನು ಶಾಸ್ತ್ರದ ಇತರ ಭಾಗಗಳಿಗೆ ಸಮಾನಗೊಳಿಸುವದರಲ್ಲಿ ಕಂಡು ಬರುತ್ತದೆ (2 ಪೇತ್ರ 3:15, 16).

**"ಅರ್ಖಿಪ್ಪನಿಗೆ . . . ಹೇಳಿರಿ" (4:17)**

ನಂತರ, ಪೌಲನು **ಅರ್ಖಿಪ್ಪನ** ಕುರಿತು ಬರೆದನು. ಈ ಹೆಸರಿನ ಅರ್ಥವು "ಕುದುರೆಯ ಯಜಮಾನ" ಎಂದಾಗಿರುತ್ತದೆ. ಬಹು ಸಂಭಾವ್ಯವಾಗಿ, ಅರ್ಖಿಪ್ಪನು ಫಿಲೆಮೋನನಿಗೆ 2ರಲ್ಲಿ ಪೌಲನ "ಸಹಭಟ" ಆಗಿದ್ದನು. ಆತನ ಕುರಿತಾಗಿ ಬೇರೆ ಇನ್ನಾವ ಮಾಹಿತಿಯು ಇರುವದಿಲ್ಲ. ಆತನು ಒನೇಸಿಮನ ಯಜಮಾನ, ಮತ್ತು ಕೊಲೊಸ್ಸೆಯಲ್ಲಿನ ಸಭೆಯಲ್ಲಿ ಒಬ್ಬ ನಾಯಕನಾಗಿದ್ದ ಫಿಲೆಮೋನನ ಮಗ ಅಥವಾ ಸಹೋದರನಾಗಿದ್ದನೆಂದು ಕೆಲವರು ಭಾವಿಸುತ್ತಾರೆ. ಆತನು ಲವೊದಿಕೀಯದಲ್ಲಿನ ಸಭೆಯ ಒಬ್ಬ ಸದಸ್ಯನಾಗಿದ್ದಿರಬಹುದು, ಆದರೆ ಬಹುಶಃ ಆತನು ಕೊಲೊಸ್ಸೆಯಲ್ಲಿನ ಸಭೆಯ ಸದಸ್ಯನಾಗಿದ್ದನು.

ಅರ್ಖಿಪ್ಪ ಹಾಗೂ ಆತನ ಸೇವೆಯ ವಿಷಯವಾಗಿ ಪೌಲನು ಹೊಂದಿದ ಆದರಭಿಮಾನವು "ನಮ್ಮ ಸಹಭಟನಾದ" ಎಂಬ ಪದಗುಚ್ಛದಲ್ಲಿ ಕಂಡು ಬರುತ್ತದೆ (ಫಿಲೆಮೋನನಿಗೆ 2). ಕೆಲವರು ಈತನನ್ನು ಲವೊದಿಕೀಯದಲ್ಲಿನ ಉಗುರು ಬೆಚ್ಚನೆಯ ಸಭೆಗೆ "ದೇವದೂತನು" ಅಥವಾ "ಸಂದೇಶವಾಹಕನು" ಎಂದು ಗುರುತಿಸುತ್ತಾರೆ (ಪ್ರಕಟನೆ 3:14). "ದೇವದೂತ" ಎಂದು ಅನುವಾದಿಸಲ್ಪಟ್ಟಿರುವ ಪದವು (ἄγγελος, *angelos*) ಒಬ್ಬ ಭೂಲೋಕದ ಸಂದೇಶವಾಹಕನನ್ನು ಸಹ ಸೂಚಿಸಬಹುದಾಗಿದೆಯಾದ್ದರಿಂದ (ಮತ್ತಾಯ 11:10; ಮಾರ್ಕ 1:2; ಲೂಕ 7:21, 27; ಯಾಕೋಬ 2:25), ಆತನು ಖಂಡಿತವಾಗಿಯೂ ಲವೊದಿಕೀಯದಲ್ಲಿನ ಸಭೆಯ *angelos* ಆಗಿದ್ದಿರಬಹುದಾಗಿದೆ. ಆತನು ಫಿಲೆಮೋನ ಮತ್ತು ಅಪ್ಫಿಯಳ ಜೊತೆಯಾಗಿ Chonae ಎಂಬಲ್ಲಿ ಕಲ್ಲೆಸೆಯಲ್ಪಟ್ಟವರಾಗಿ ಕೊಲ್ಲಲ್ಪಟ್ಟರೆಂದು ಸಂಪ್ರದಾಯವು ತಿಳಿಸುತ್ತದೆ.[14]

**"ನೀನು ಕರ್ತನಿಂದ ಹೊಂದಿರುವ ಸೇವೆಯನ್ನು ನೆರವೇರಿಸುವದಕ್ಕೆ ಎಚ್ಚರವಾಗಿರಬೇಕೆಂದು ಹೇಳಿರಿ" (4:17)**

**ಎಚ್ಚರವಾಗಿರಬೇಕೆಂದು** (βλέπε, *blepe*) ಎಂಬುದು, ಕೊಲೊಸ್ಸೆ 2:8ರಲ್ಲಿರುವಂತೆಯೇ, ಒಂದು ಎಚ್ಚರಿಕೆಯಾಗಿರಬಲ್ಲದು (ನೋಡಿರಿ ಗಲಾತ್ಯ 5:15; ಎಫೆಸ 5:15; ಫಿಲಿಪ್ಪಿ 3:2). ಪೌಲನು ಅರ್ಖಿಪ್ಪನ **ಸೇವೆಯನ್ನು** (διακονία, *diakonia*) ಕುರಿತು ಯಾವದೇ ವಿವರಗಳನ್ನಾಗಲಿ ಕೊಡುವದಿಲ್ಲ, ಈ ಬುದ್ಧಿವಾದವನ್ನು ಆತನಿಗೆ ಯಾರು ಹೇಳಬೇಕೆಂಬುದನ್ನೂ ತಿಳಿಸಿರುವದಿಲ್ಲ. ಬಹುಶಃ ಕರ್ತನ ಸೇವೆಯಲ್ಲಿ ಆತನಿಗೆ ಇಡೀ ಸಭೆಯವರು ಪ್ರೋತ್ಸಾಹವನ್ನು ನೀಡಬೇಕೆಂಬುದು ಪೌಲನ ಅಪೇಕ್ಷೆಯಾಗಿರಬಹುದಾಗಿದೆ. ಸಭೆಯು ಅರ್ಖಿಪ್ಪನ ಸೇವೆಯ ವೈಶಾಲ್ಯತೆಯನ್ನು ಬಲ್ಲವರಾಗಿದ್ದರೆಂಬುದು ಪೌಲನ ಊಹೆಯಾಗಿತ್ತು.

ಪೌಲನು ಅರ್ಖಿಪ್ಪನ ಸೇವೆಯ ಬಗ್ಗೆ ಕಳಕಳಿಯನ್ನು ಹೊಂದಿದ್ದನು, ಆದರೂ ಅದು ಯಾವ ಸ್ವಭಾವದ್ದೆಂಬುದನ್ನು ಆತನು ತಿಳಿಯಪಡುಸುವದಿಲ್ಲ. Eduard Lohse ಹೀಗೆ ಬರೆಯುತ್ತಾನೆ, "'ಸೇವೆ' (*diakonia*) ಭಾವನೆಯು ಸೇವೆ ನೆರವೇರಿಸುವದನ್ನು ಸೂಚಿಸುತ್ತದೆ ಹೊರತು ಸಭಾ ಹಿರಿಯನ ಹುದ್ದೆಯನ್ನು ನಿಭಾಯಿಸುವದನ್ನಲ್ಲ."[15] ಇದು ನಿರ್ಲಕ್ಷಕ್ಕೊಳಗಾದ ವಿಧವೆಯ "ಸೇವೆ" (διακονέω, *diakoneō*) ಯನ್ನು ಮಾಡುವದಕ್ಕೆ ಆರಿಸಿಕೊಳ್ಳಲ್ಪಟ್ಟ ಏಳು ಮಂದಿಯ ವಿಷಯದಲ್ಲಿ ಸೂಚ್ಯಾರ್ಥಗಳನ್ನು ಹೊಂದಿರುತ್ತದೆ (ಅಪೊಸ್ತಲರ ಕೃತ್ಯಗಳು 6:2, 3). ಅವರು ಸಭಾಹಿರಿಯರಾಗಿರುವದಕ್ಕೆ ಆರಿಸಿಕೊಳ್ಳಲ್ಪಟ್ಟಿ

ರಲಿಲ್ಲ, ಯಾಕೆಂದರೆ ಅವರಿಗಿರಬೇಕಾದ ಏಕೈಕ ಅರ್ಹತೆಯೆಂದರೆ "ಪವಿತ್ರಾತ್ಮಭರಿತರೂ ಜ್ಞಾನಸಂಪನ್ನರೂ" ಆಗಿರಬೇಕಾಗಿತ್ತು (ಅಪೊಸ್ತಲರ ಕೃತ್ಯಗಳು 6:3; ಇದನ್ನು 1 ತಿಮೊಥೆ 3:8-13ರೊಂದಿಗೆ ಹೋಲಿಸಿರಿ).

ಅರ್ಖಿಪ್ಪನ ಸೇವೆಯು ವಿಶ್ವಾಸಿಗಳೇತರರನ್ನು ಸಂಧಿಸುವದಕ್ಕೆ ಸುವಾರ್ತೆ ಸಾರುವದು ಅಥವಾ ಸದಸ್ಯರಿಗೆ ಉಪದೇಶದ ಸೇವೆಯನ್ನು ಮಾಡುವದು ಆಗಿರಬಹುದಾಗಿದೆ. ಪೌಲನು ಆತನಿಗೆ ಸಭೆಯನ್ನು ಪರಿಪಕ್ವತೆಗೆ ನಡಿಸುವ ಮತ್ತು ಸಂಘಟಿಸುವ ಜವಾಬ್ದಾರಿಯನ್ನು ವಹಿಸಿರಬಹುದಾಗಿದೆ, ಅದೇ ಸೇವೆಯನ್ನೇ ಆತನು ತೀತನಿಗೆ ಒಪ್ಪಿಸಿದ್ದನು (ತೀತನಿಗೆ 1:5), ಅಥವಾ ಏಳು ಮಂದಿಗೆ ವಹಿಸಲಾಗಿದ್ದ ಸಹಾಯಾರ್ಥವಾದ ಕೆಲಸವನ್ನು ಆತನಿಗೆ ವಹಿಸಿದ್ದಿರಬಹುದಾಗಿದೆ. ಅರ್ಖಿಪ್ಪನು ಇವುಗಳಲ್ಲಿ ಯಾವದಾದರೊಂದು ಅಥವಾ ಎಲ್ಲಾ ಸೇವೆಗಳಲ್ಲಿ ಮಗ್ನನಾಗಿದ್ದಿರಬಹುದಾಗಿದೆ.

ಅರ್ಖಿಪ್ಪನ ವಿಷಯದಲ್ಲಿರುವ ಹಾಗೆಯೇ, ಕ್ರಿಸ್ತನ ದೇಹದಲ್ಲಿನ ಎಲ್ಲಾ ಸದಸ್ಯರು ಸಹ ಸೇವೆಯ ವಿಷಯದಲ್ಲಿ ನಂಬಿಗಸ್ತರು ಮತ್ತು ಕರ್ತನಿಗೆ ಸೇವೆ ಮಾಡುವ ಕ್ಷೇತ್ರದಲ್ಲಿ ಜಾಗರೂಕತೆಯನ್ನು ವಹಿಸಲು "ಎಚ್ಚರವಾಗಿರಬೇಕು." ಪೌಲನು ಈ ಮುಂಚೆ ದಾಸರಿಗೆ "ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ" ಎಂದು ಬುದ್ಧಿವಾದ ಹೇಳಿದ್ದನು (ಕೊಲೊಸ್ಸೆ 3:23). ಸಭೆಯ ಸದಸ್ಯರು ತಾವು ಕರ್ತನಿಗೋಸ್ಕರ ಮಾಡಬಲ್ಲ ಕೆಲಸವನ್ನು ನಿರ್ವಹಿಸುವದರಲ್ಲಿ ಎಚ್ಚರವಾಗಿರಬೇಕೆಂದು ಒಬ್ಬರನ್ನೊಬ್ಬರು ಪ್ರೋತ್ಸಾಹಪಡಿಸಬೇಕು.

## ಮುಕ್ತಾಯದ ಹೇಳಿಕೆಗಳು (4:18)

**18ಇದು ಪೌಲನೆಂಬ ನಾನು ಸ್ವಂತ ಕೈಯಿಂದ ಬರೆದ ವಂದನೆ. ನಾನು ಸೆರೆಯಲ್ಲಿದ್ದೇನೆಂಬುದನ್ನು ಜ್ಞಾಪಕ ಮಾಡಿಕೊಳ್ಳಿರಿ. ಕೃಪೆಯು ನಿಮ್ಮೊಂದಿಗಿರಲಿ.**

### "ಇದು ಪೌಲನೆಂಬ ನಾನು ಸ್ವಂತ ಕೈಯಿಂದ ಬರೆದ ವಂದನೆ"

**ಪೌಲನು** ಕೊಲೊಸ್ಸೆಯವರಿಗೆ ಇಡೀ ಪತ್ರಿಕೆಯನ್ನು ತಾನೇ ಬರೆದನೋ ಅಥವಾ ಹೇಳಿ ಬರೆಸಿದನೋ? ಹಲವಾರು ವ್ಯಾಖ್ಯಾನಕಾರರು ಯೋಚಿಸುವದೇನೆಂದರೆ ಆತನು ಅದನ್ನು ಹೇಳಿ ಬರೆಸಿದನು ಮತ್ತು ಬಳಿಕ ವಂದನೆಯನ್ನು ಬರೆದು ಅದಕ್ಕೆ ತನ್ನ **ಸ್ವಂತ ಕೈಯಿಂದ** ಸಹಿಯನ್ನು ಹಾಕಿದನು, ಅದು ಆತನ ಅಪೊಸ್ತಲಿಕ ಅಧಿಕಾರಕ್ಕೆ ಒಂದು ಮುದ್ರೆಯಂತಾಗಿತ್ತು — ಅದು ಸುಳ್ಳುಪತ್ರ ಸೃಷ್ಟನೆ ವಿರುದ್ಧ ಒಂದು ಭದ್ರತೆಯಾಗಿತ್ತು ಎಂಬದೆ. ಒಂದು ಪತ್ರಿಕೆಯನ್ನು ಹೇಳಿ ಬರೆಸಿದ ಬಳಿಕ, ಅಂತ್ಯದಲ್ಲಿ ಅದಕ್ಕೊಂದು ಮುಕ್ತಾಯದ ಟಿಪ್ಪಣಿಯನ್ನು ಬರೆದು ಅದಕ್ಕೆ ಒಬ್ಬನ ಸಹಿಯನ್ನು ಹಾಕುವದು ಗ್ರೀಕ್ ಹಾಗೂ ರೋಮನ್ ಜಗತ್ತಿನಲ್ಲಿ ಸರ್ವಸಾಧಾರಣವಾದ ಅಭ್ಯಾಸವಾಗಿತ್ತು. ಪೌಲನ ವೈಯಕ್ತಿಕ ಸಹಿ ಹಾಗೂ ವಂದನೆಗಳು ಬೇರೆ ಪತ್ರಿಕೆಗಳಲ್ಲಿ ಸಹ ಕಾಣಿಸಿಕೊಂಡಿರುತ್ತವೆ (1 ಕೊರಿಂಥ 16:21; ಗಲಾತ್ಯ 6:11; 2 ಥೆಸಲೋನಿಕ 3:17; ಫಿಲೆಮೋನನಿಗೆ 19). ಬರೆಯುವವನು ತಾನೇ ಬರೆದಿದ್ದೇನೆಂದು ಹೇಳಿಕೊಳ್ಳುವ ಏಕೈಕಕ ಪತ್ರಿಕೆಯೆಂದರೆ ತೆರ್ತ್ಯನು ಬರೆದ ರೋಮಾಪುರದವರಿಗೆ ಪತ್ರಿಕೆಯಾಗಿರುತ್ತದೆ (ರೋಮಾ 16:22).

### "ನಾನು ಸೆರೆಯಲ್ಲಿದ್ದೇನೆಂಬದನ್ನು ಜ್ಞಾಪಕ ಮಾಡಿಕೊಳ್ಳಿರಿ"

ಪೌಲನಿಗೋಸ್ಕರ ಪ್ರಾರ್ಥಿಸಬೇಕೆಂದು ಮನವಿ ಮಾಡಿಕೊಳ್ಳುವದು ಕ್ಲುಪ್ತ ಹಾಗೂ ನಿರ್ದಿಷ್ಟವಾಗಿತ್ತು. ಅದು ಪೌಲನ ಸ್ಥಿತಿಯ ಬಗ್ಗೆ ಬಹಳಷ್ಟನ್ನು ಹೇಳುವದಕ್ಕೆ ಹೊಂದಿತ್ತು, ಆದರೆ ಆತನು ತನ್ನ ವೈಯಕ್ತಿಕ ಪರಿಸ್ಥಿತಿಯನ್ನು ಹೇಳಿ ಜನರ ಮೇಲೆ ಭಾರವನ್ನು ಹಾಕುವದಕ್ಕೆ ಆತನಿಗೆ ಇಷ್ಟವಿರಲಿಲ್ಲ. **ಜ್ಞಾಪಕ ಮಾಡಿಕೊಳ್ಳಿರಿ** (μνημονεύω, *mnēmoneuō*) ಎಂಬ ಪದವು ಯೆರೂಸಲೇಮಿನ ನಾಯಕರು ಹೇಳಿದ ಬುದ್ಧಿವಾದದಲ್ಲಿ ಸಹ ಸೇರಿತ್ತು: "ಬಡವರನ್ನು ಜ್ಞಾಪಕಮಾಡಿಕೊಳ್ಳಬೇಕೆಂಬ" (ಗಲಾತ್ಯ 2:10). ಕೊಲಸ್ಸೆಯವರು ಇದನ್ನು ತಮ್ಮ ಪ್ರಾರ್ಥನೆಗಳ ಮೂಲಕ ಮತ್ತು ತಮಗೆ ಸಾಧ್ಯವಾದಷ್ಟು ಆರ್ಥಿಕ ಸಹಾಯವನ್ನು ಕಳುಹಿಸುವ ಮೂಲಕ ಮಾಡಬಹುದಿತ್ತು. ಫಿಲಿಪ್ಪಿಯದ ಸಹೋದರರು ಪೌಲನು ಈ ವಿಧದಲ್ಲಿ ಜ್ಞಾಪಕ ಮಾಡಿಕೊಂಡಿದ್ದರು (ಫಿಲಿಪ್ಪಿ 4:15, 16). ಕೆಲವು ವ್ಯಾಖ್ಯಾನಕಾರರು ಮುಕ್ತಾಯಕ್ಕೆ ಬರುವದೇನೆಂದರೆ ಪೌಲನು ಅವರಿಗೆ ತನ್ನ ಅಪೊಸ್ತಲಿಕ ಅಧಿಕಾರವನ್ನು ಜ್ಞಾಪಕ ಮಾಡಿಕೊಳ್ಳುವಂತೆ ಕೇಳಿಕೊಳ್ಳುತ್ತಿದ್ದಾನೆಂಬದನ್ನು ತಳ್ಳಿಹಾಕಬಹುದು. ಆತನ ಮನವಿಯು ಆತನ ಸೆರೆವಾಸದ ಕುರಿತಾಗಿತ್ತು ಹೊರತು ಆತನ ಅಪೊಸ್ತಲಿಕ ಅಧಿಕಾರದ ಕುರಿತಾಗಿರಲಿಲ್ಲ, ಅದನ್ನು ಆತನು ಮುಂಚೆಯೇ ದೃಢಪಡಿಸಿದ್ದನು (1:1).

### "ಕೃಪೆಯು ನಿಮ್ಮೊಂದಿಗಿರಲಿ"

ದೇವರ ಅಥವಾ ಯೇಸುವಿನ **ಕೃಪೆಯು** ವಾಚಕರ ಮೇಲೆ ಇರಲಿ ಎಂಬದಾಗಿ ಹಾರೈಸುತ್ತಾ ತನ್ನ ಪತ್ರಿಕೆಗಳನ್ನು ಆರಂಭಿಸುವದು ಮತ್ತು ಅಂತ್ಯಗೊಳಿಸುವದು ಪೌಲನ ಒಂದು ಸರ್ವಸಾಧಾರಣವಾದ ಅಭ್ಯಾಸವಾಗಿತ್ತು.[16] ಆತನು ತನ್ನ ಜೊತೆ ಕ್ರೈಸ್ತರ ಮೇಲೆ ತನಗಿರುವ ಪ್ರೀತಿಯ ಉದಾತ್ತತೆಯನ್ನು ಮತ್ತು ದೇವರ ಒಳ್ಳೇತನದ ಮೇಲಿನ ತನ್ನ ಅವಲಂಬನೆಯನ್ನು ಪ್ರಕಟಗೊಳಿಸುತ್ತಾ ತನ್ನ ಪತ್ರಿಕೆಯನ್ನು ಅಂತ್ಯಗೊಳಿಸುತ್ತಾನೆ. ಈ ರೀತಿಯಾಗಿ, ಆತನು ತನ್ನ ವಾಚಕರಲ್ಲಿ ತನಗಿರುವ ಆಸಕ್ತಿಯನ್ನು ತೋರ್ಪಡಿಸಿದನು. ಆತನು ತನ್ನ ವಾಚಕರಿಗೆ ದೇವರ ಆಶೀರ್ವಾದಗಳು ಹಾಗೂ ಕೃಪಾಕಟಾಕ್ಷವು ದೊರಕುವಂತಾಗಲಿ ಎಂದು ನಿರೀಕ್ಷೆಯನ್ನು ವ್ಯಕ್ತಪಡಿಸುವದು ಪತ್ರಿಕೆಯನ್ನು ಮುಕ್ತಾಯಗೊಳಿಸಲು ಒಂದು ಸೂಕ್ತವಾದ ವಿಧವಾಗಿತ್ತು.

## ಅನ್ವಯಿಸುವಿಕೆ

### ಕ್ರಿಸ್ತನಿಗೋಸ್ಕರ ಜೊತೆಯಾಗಿ ಕೆಲಸ ಮಾಡುವದು (4:10-14)

ಪೌಲನ ಜೊತೆಯಲ್ಲಿ ತಮ್ಮ ಹಿಂದಿನ ತಪ್ಪುಗಳಿಂದ ಚೇತರಿಸಿಕೊಂಡಿದ್ದಂಥ ಇಬ್ಬರು ವ್ಯಕ್ತಿಗಳಿದ್ದರು. ಒನೇಸಿಮನು ಒಬ್ಬ ದಾಸನಾಗಿದ್ದನು, ತನ್ನ ಯಜಮಾನನನ್ನು ತೊರೆದು ಬಂದಿದ್ದನು. ಪೌಲನು ಆತನನ್ನು ಸಂಧಿಸಿ ಕ್ರಿಸ್ತನ ಬಳಿಗೆ ಕರೆತಂದನು. ಆತನು ದಾಸನ ಯಜಮಾನನಾದ ಫಿಲೆಮೋನನಿಂದ ಸುವಾರ್ತೆಯನ್ನು ಪ್ರಸಾರಣೆ ಮಾಡುವದಕ್ಕೆ ಸಹಾಯವಾಗುವಂತೆ ಅವನನ್ನು ಕಳುಹಿಸುವಂತೆ ಅನುಮತಿಯನ್ನು ಪಡೆದಿರಬಹುದಾಗಿದೆ. ಮಾರ್ಕನು, ಈತನು ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ ಪೌಲ ಹಾಗೂ ಬಾರ್ನಬರ

ಜೊತೆಗೂಡಿದ್ದನು, ಆದರೆ ಪೆರ್ಗೆಯಲ್ಲಿ ಅವರನ್ನು ಮಧ್ಯದಲ್ಲಿಯೇ ತೊರೆದು ಬಿಟ್ಟು ಮನೆಗೆ ಹಿಂದಿರುಗಿದ್ದನು (ಅಪೊಸ್ತಲರ ಕೃತ್ಯಗಳು 13:13). ನಂತರ, ಎರಡನೆಯ ಸುವಾರ್ತಾ ಪ್ರಯಾಣದ ವೇಳೆ ಪೌಲನು ಆತನನ್ನು ಜೊತೆಯಲ್ಲಿ ಕರೆದೊಯ್ಯಲು ನಿರಾಕರಿಸಿದನು (ಅಪೊಸ್ತಲರ ಕೃತ್ಯಗಳು 15:38), ಆದರೆ ಆತನು ಪುನಃ ಪೌಲನ ವಿಶ್ವಾಸವನ್ನು ಗಳಿಸಿಕೊಂಡವನಾಗಿ ಆತನಿಗೆ ಉಪಶಮನ ಆಗಿರಬಹುದಾಗಿದೆ.

*ಜನರು ತಮ್ಮ ಗತಕಾಲದಿಂದ ಚೇತರಿಸಿಕೊಳ್ಳಬಲ್ಲರು.* ಕರ್ತನನ್ನು ಅಲ್ಲಗಳೆದಿದ್ದ ಪೇತ್ರನು, ಮುಂದೆ ಒಬ್ಬ ಗಮನಾರ್ಹವಾದ ಅಪೊಸ್ತಲನಾದನು. ಮಗ್ದಲದ ಮರಿಯಳು ಮುಂಚೆ ಏಳು ದೆವ್ವಗಳಿಂದ ಪೀಡಿತಳಾಗಿದ್ದಾಗ್ಯೂ, ನಂತರ ಒಬ್ಬ ನಂಬಿಗಸ್ತ ಹಿಂಬಾಲಕಳಾದಳು (ಲೂಕ 8:2). ಪೌಲನು ಕೊರಿಂಥದವರಿಗೆ ಅವರಲ್ಲಿ ಕೆಲವರು ಜಾರರಾಗಿದ್ದರೆಂಬುದನ್ನು ಜ್ಞಾಪಕ ಪಡಿಸುತ್ತಾನೆ (1 ಕೊರಿಂಥ 6:9-11).

ಯೇಸು ಸುಂಕದವರ ಹಾಗೂ ಪಾಪಿಗಳ ಸಂಗಡ ಸಹವಾಸವಿಟ್ಟುಕೊಂಡಿದ್ದನು (ಮತ್ತಾಯ 9:10, 11; 11:19). ಜನರು ಮುಂದೆ ಏನಾಗುವರೆಂಬುದೇ ಯೇಸುವಿನ ಕಳಕಳಿಯಾಗಿತ್ತೇ ಹೊರತು ಅವರು ಹಿಂದೆ ಏನಾಗಿದ್ದರೆಂಬದರ ಬಗ್ಗೆ ಆತನು ಚಿಂತಿಸಲಿಲ್ಲ. ವ್ಯಭಿಚಾರದಲ್ಲಿ ಸಿಕ್ಕಿದ ಸ್ತ್ರೀಯ ಮೇಲೆ ಆರೋಪ ಮಾಡಿದವರೆಲ್ಲರು ಹೊರಟು ಹೋದ ಬಳಿಕ, ಆತನು ಆಕೆಗೆ, "ನಾನೂ ನಿನ್ನನ್ನು ಶಿಕ್ಷಿಸುವದಿಲ್ಲ; ಹೋಗು, ಇನ್ನು ಮೇಲೆ ಪಾಪಮಾಡಬೇಡ" (ಯೋಹಾನ 8:11).

ಯೇಸು ಜನರ ಜೀವಿತಗಳನ್ನು ಮಾರ್ಪಡಿಸಿ ಅವರನ್ನು ತನ್ನ ನಂಬಿಗಸ್ತ ಸೇವಕರನ್ನಾಗಿ ಮಾಡಬಲ್ಲನು. ಕ್ರೈಸ್ತರಾಗುವವರ ವಿರುದ್ಧವಾಗಿ ನಾವು ಹಿಂದಿನ ಪಾಪಗಳನ್ನು ಲೆಕ್ಕಕ್ಕೆ ಇಟ್ಟುಕೊಳ್ಳಬಾರದು. ಕರ್ತನ ಸಹಾಯದೊಂದಿಗೆ, ಅವರು ಆತನ ಸೇವೆಯಲ್ಲಿ ಬಹಳವಾಗಿ ಪ್ರಯೋಜಕರಾಗಬಲ್ಲರು. ಜನರು ಮುಂಚೆ ಏನಾಗಿರುತ್ತಿದ್ದರೋ ಎಂಬುದನ್ನು ನಾವು ನೋಡಬಾರದು, ಆದರೆ ಅವರು ಮುಂದೆ ಏನಾಗಬಲ್ಲರು ಎಂಬುದನ್ನು ನೋಡಬೇಕು.

*ಬೇರೆ ಬೇರೆ ಹಿನ್ನಲೆಯುಳ್ಳ ವ್ಯಕ್ತಿಗಳು ಒಟ್ಟಾಗಿ ಸಾಮರಸ್ಯದಿಂದ ಕೆಲಸ ಮಾಡಬಲ್ಲರು.* ಇದು ಅವರು ಯೇಸುವಿನ ಹಿಂಬಾಲಕರಾಗಿದ್ದರ ಫಲಿತವಾಗಿತ್ತು. ಕ್ರಿಸ್ತನ ಎಲ್ಲಾ ಹಿಂಬಾಲಕರ ವಿಷಯದಲ್ಲಿ ಸಹ ಇದು ಅಷ್ಟೇ ಸತ್ಯವಾಗಿರತಕ್ಕದ್ದು. ನಾವೆಲ್ಲರು ಒಂದೇ ದೇಹದಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ (1 ಕೊರಿಂಥ 12:13). ನಾವು ಕ್ರಿಸ್ತನಲ್ಲಿ ಐಕ್ಯಗೊಳ್ಳಲು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ನಾವು ಇನ್ನು ಮೇಲೆ ಯೆಹೂದ್ಯರು ಅಥವಾ ಗ್ರೀಕ್ ರು ಎಂಬ ವರ್ಗೀಕರಣಗೊಳಿಸಲ್ಪಡುವದಿಲ್ಲ, ಯಾಕೆಂದರೆ "ಕ್ರಿಸ್ತ ಯೇಸುವಿನಲ್ಲಿ ಒಂದೇ" ಆಗಿದ್ದೇವೆ (ಗಲಾತ್ಯ 3:27, 28).

ಕುಲ ಮತ್ತು ಹಿನ್ನಲೆ ಏನೇ ಆಗಿದ್ದರೂ ಸರಿಯೇ, ಯೇಸುವಿಗೋಸ್ಕರ ನಾವು ಸಾಮರಸ್ಯದಿಂದ ಕೆಲಸ ಮಾಡಬೇಕು. ಆತನು ಧರ್ಮಶಾಸ್ತ್ರವನ್ನು ರದ್ದುಗೊಳಿಸುವ ಮೂಲಕ ಯೆಹೂದ್ಯರು ಮತ್ತು ಅನ್ಯಜನರ ಮಧ್ಯದಲ್ಲಿದ್ದ ಅಡ್ಡಗೋಡೆಯನ್ನು ಕೆಡವಿ ಹಾಕಿದನು. ಆತನು ಶಿಲುಬೆಯ ಮೂಲಕ ನಮ್ಮೆಲ್ಲರನ್ನು ದೇಹದಲ್ಲಿ ಸೇರಿಸಿ ದೇವರೊಂದಿಗೆ ಸಂಧಾನಪಡಿಸುವದಕ್ಕಾಗಿ ಇದನ್ನು ಮಾಡಿದನು (ಎಫೆಸ 2:14-16).

*ನಮ್ಮ ಮುಖ್ಯ ಗಮನವು ದೇವರ ರಾಜ್ಯವಾಗಿರತಕ್ಕದ್ದು.* ಬೈಬಲಿನ ಪ್ರಮುಖ

ಚರ್ಚೆಯಾಂಶಗಳಲ್ಲಿ ದೇವರ ರಾಜ್ಯವು ಒಂದಾಗಿರುತ್ತದೆ. ಅದು ರೋಮನ್ ರಾಜ್ಯದ ವೇಳೆಯಲ್ಲಿ ಸ್ಥಾಪಿಸಲ್ಪಡುವದೆಂದು ದಾನಿಯೇಲನು ಪ್ರವಾದಿಸಿನು. ಯೋಹಾನ, ಯೇಸು, ಅಪೊಸ್ತಲರು, ಮತ್ತು ಎಪ್ಪತ್ತು ಮಂದಿ ಶಿಷ್ಯರು ದೇವರ ರಾಜ್ಯವು ಶೀಘ್ರದಲ್ಲಿ ಆರಂಭಗೊಳ್ಳಲಿದೆ ಎಂದು ಸಾರಿದರು (ಮತ್ತಾಯ 3:2; 4:17; 10:7; ಲೂಕ 10:9, 11).

ಪರಲೋಕಕ್ಕೆ ಹಿಂದಿರುಗುವದಕ್ಕೆ ಮುನ್ನ ಯೇಸು ಮಾತಾಡಿದ ಕಡೇ ಸಂಗತಿಯೆಂದರೆ ದೇವರ ರಾಜ್ಯ ಆಗಿರುತ್ತದೆ (ಅಪೊಸ್ತಲರ ಕೃತ್ಯಗಳು 1:4-8). ಫಿಲಿಪ್ಪನು ಸಮಾರ್ಯದವರಿಗೆ ನೀಡಿದ ಸಂದೇಶವು ದೇವರ ರಾಜ್ಯದ ಕುರಿತಾಗಿತ್ತು (ಅಪೊಸ್ತಲರ ಕೃತ್ಯಗಳು 8:12). ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಪೌಲನು ಕೊನೆಯ ಬಾರಿಗೆ ಹೆಸರಿಸಲ್ಪಟ್ಟಾಗ, ಆತನು ರಾಜ್ಯದ ಬಗ್ಗೆ ಸಾರುತ್ತಿದ್ದನು (ಅಪೊಸ್ತಲರ ಕೃತ್ಯಗಳು 28:31), ಅದು ಆತನ ಸೇವೆಯ ಲಕ್ಷ್ಯ ಹಾಗೂ ಭಾರವಾಗಿತ್ತು (ಅಪೊಸ್ತಲರ ಕೃತ್ಯಗಳು 20:25).

ದೇವರ ರಾಜ್ಯದ ಮೌಲ್ಯವು ಒಬ್ಬನಿಗೆ ಹೊಲದಲ್ಲಿ ಸಿಕ್ಕಿದ ದ್ರವ್ಯದ ರೀತಿಯಂತಿರುತ್ತದೆ. ಅದು ದೊಡ್ಡ ಬೆಲೆಯುಳ್ಳ ಮುತ್ತಿಗೆ ಹೋಲಿಕೆಯಾಗಿದೆ: ಅದನ್ನು ಕಂಡುಕೊಂಡವನು ತನ್ನ ಬದುಕನ್ನೆಲ್ಲಾ ಮಾರಿ ಅದನ್ನು ಕೊಂಡುಕೊಂಡನು (ಮತ್ತಾಯ 13:44-46). ರಾಜ್ಯದ ಶ್ರೇಷ್ಠತೆಯ ಕಾರಣದಿಂದಾಗಿ, ನಮ್ಮ ಜೀವಿತಗಳು ಅದನ್ನು ವಿಸ್ತರಣೆ ಮಾಡುವದಕ್ಕಾಗಿ ಸಮರ್ಪಿತವಾಗಬೇಕು, ಹೀಗೆ ರಾಜ್ಯದ ಅರಸನಾಗಿರುವ ಯೇಸುವಿಗೆ ಗೌರವ ಹಾಗೂ ವಿಧೇಯತೆಯನ್ನು ತೋರಿಸುವದಕ್ಕೆ ಸಾಧ್ಯವಾಗುತ್ತದೆ.

ಪೌಲನ ಸಂಗಡವಿದ್ದವರ ಹಾಗೆಯೇ, ನಾವು ಸಹ ರಾಜ್ಯಕ್ಕೋಸ್ಕರ ಜೊತೆಗೆಲಸದವ ರಾಗಿರಬಲ್ಲೆವು. ಪೌಲನು ಕೊರಿಂಥದವರಿಗೆ ಅವರು ಐಕ್ಯವಾಗಿರಬೇಕೆಂದು ಮತ್ತು ಕ್ರಿಸ್ತನಿಗೋಸ್ಕರ ಜೊತೆಗೆಲಸದವರಾಗಿರುವ ಸುವಾರ್ತೆಯ (1 ಕೊರಿಂಥ 1:10-13) ಬೋಧಕರ ಹಿಂದೆ ಸಾಲುಗಟ್ಟಿ ನಿಲ್ಲಬೇಡಿರಿ, ಅವರು ಒಂದೇ ಪಕ್ಷಕ್ಕೆ ಸೇರಿದವರು ಎಂದು ಬುದ್ಧಿವಾದ ಹೇಳುತ್ತಾನೆ (1 ಕೊರಿಂಥ 3:9). ಈ ಕಾರಣಕ್ಕಾಗಿ, ಅವರು ಒಬ್ಬ ಬೋಧಕನೊಂದಿಗೆ ತಮ್ಮನ್ನು ಗುರುತಿಸಿಕೊಂಡು ಬೇರೆಯವರನ್ನು ಮತ್ತು ಕ್ರಿಸ್ತನನ್ನು ಹೊರಗಿಡುವವರಾಗಬಾರದಿತ್ತು.

ಅನೇಕ ಸಾರಿ ಪೈಪೋಟಿ, ಅಸೂಯೆ, ಮತ್ತು ಹಗೆತನಗಳು ರಾಜ್ಯಕ್ಕಾಗಿ ಕೆಲಸ ಮಾಡುವವರೊಳಗೆ ಇರುತ್ತವೆ. ನಮ್ಮ ಹೋರಾಟವು ಒಬ್ಬರಿಗೊಬ್ಬರ ವಿರುದ್ಧವಾಗಿ ಅಲ್ಲ, ಆದರೆ ನಮ್ಮ ಪ್ರಧಾನ ವೈರಿಯಾದ, ಸೈತಾನನ ವಿರುದ್ದವೂ ಆತನ ಸೇವೆ ಮಾಡುವವರ ವಿರುದ್ಧವೂ ಆಗಿರುತ್ತದೆ (ಎಫೆಸ 6:11, 12).

ಕ್ರಿಸ್ತನಿಗೋಸ್ಕರ ಒಟ್ಟಾಗಿ ಕೆಲಸ ಮಾಡುವ ವೇಳೆ, ನಾವು ಶ್ರದ್ಧೆಯಿಂದ ಸೇವೆ ಮಾಡಬೇಕು. ಆತನು ನಮ್ಮನ್ನು ಹಿಂದಿನ ಪಾಪಗಳಿಂದ ಬಿಡಿಸಿದ್ದಾನೆಂಬುದನ್ನು ತಿಳಿದವರಾಗಿ, ನಮ್ಮ ದೃಷ್ಟಿಯನ್ನು ದೇವರ ರಾಜ್ಯದ ಮೇಲೆಯೇ ಇಟ್ಟು ಪರಸ್ಪರ ಸಾಮರಸ್ಯದಿಂದ ಕೆಲಸ ಮಾಡತಕ್ಕದ್ದು.

## ನಂಬಿಗಸ್ತ ಸಹಚರರು (4:10-14)

ಪೌಲನು ತನ್ನ ಸಂಗಡ ಕೆಲಸ ಮಾಡುತ್ತಿದ್ದವರ ಕುರಿತು ಸಕಾರಾತ್ಮಕ ಹೇಳಿಕೆಗಳನ್ನು ನೀಡುತ್ತಾನೆ. ನಾವು ನಮ್ಮ ಜೊತೆ ಕ್ರೈಸ್ತರ ಬಗ್ಗೆ ಒಳ್ಳೇ ಮಾತುಗಳನ್ನಾಡಬೇಕು ಮತ್ತು ಬೇರೆಯವರು ನಮ್ಮ ವಿಷಯದಲ್ಲಿ ಒಳ್ಳೇ ಮಾತುಗಳನ್ನಾಡುವ ರೀತಿಯಲ್ಲಿ ನಾವು

ನಡೆದುಕೊಳ್ಳಬೇಕು. ಬೇರೆಯವರು ಅನುಕರಣ ಮಾಡುವದಕ್ಕೆ ಪೌಲನ ಸಂಗಡಿಗರು ಒಳ್ಳೇ ಮಾದರಿಗಳಾಗಿರುತ್ತಾರೆ.

*ನಂಬಿಗಸ್ತ ಸ್ನೇಹಿತ.* ಎಫೆಸದಲ್ಲಿ ಕೋಪಗೊಂಡಿದ್ದ ಜನರ ಗುಂಪಿನಿಂದ ನಾಟಕ ಶಾಲೆಯೊಳಗೆ ಎಳೆದುಕೊಂಡು ಹೋಗಲ್ಪಟ್ಟ ಹೊರತಾಗಿಯೂ ನಂಬಿಗಸ್ತನಾಗಿ ಉಳಿದುಕೊಂಡ ಅರಿಸ್ತಾರ್ಕನು ಒಬ್ಬ ಒಳ್ಳೇ ಕ್ರೈಸ್ತನಿಗೆ ಉದಾಹರಣೆಯಾಗಿದ್ದಾನೆ (ಅಪೊಸ್ತಲರ ಕೃತ್ಯಗಳು 19:29). ಆತನು ಪೌಲನೊಂದಿಗೆ ಪ್ರಯಾಣಿಸಿದನು (ಅಪೊಸ್ತಲರ ಕೃತ್ಯಗಳು 20:4) ಮತ್ತು ಪೌಲನು ಸೆರೆಯವನಾಗಿದ್ದಾಗ್ಯೂ ಆತನ ಸಂಗಡ ಉಳಿದುಕೊಂಡನು (ಅಪೊಸ್ತಲರ ಕೃತ್ಯಗಳು 27:2). ಪ್ರತಿಯೊಬ್ಬ ಕ್ರೈಸ್ತನು ಸಹ ಅರಿಸ್ತಾರ್ಕನ ಹಾಗೆ ಒಬ್ಬ ನಂಬಿಗಸ್ತ ಸ್ನೇಹಿತನಾಗಿರುವ ಅಗತ್ಯವಿದೆ. ನಾವು ಬೇರೆಯವರಿಗೆ ಅಂಥ ಸ್ನೇಹಿತರಾಗುವ ಹಾಗೆ ಶ್ರಮಿಸೋಣ.

*ಪರಿಪಕ್ವಗೊಂಡ ಸಹೋದರ.* ಮಾರ್ಕನು ಒಬ್ಬ ವಿಶ್ವಾಸಾರ್ಹನಲ್ಲದ ಯುವಕನಾಗಿದ್ದು ಮುಂದೇ ಕರ್ತನ ಪ್ರಯೋಜನವುಳ್ಳ ಸೇವಕನಾಗಿ ಪರಿಪಕ್ವಹಗೊಂಡ ವ್ಯಕ್ತಿಯಾಗಿದ್ದಾನೆ. ಯೌವನದ ತಪ್ಪುಗಳು ಯೇಸುವಿನ ಸೇವೆ ಮಾಡದಂತೆ ತನಗೆ ತಡೆಯಾಗುವಂತೆ ಯಾವನೂ ಅನುಮತಿಸಬಾರದು. ಈ ವಿಧದಲ್ಲಿ ಅಭಿವೃದ್ಧಿಗೊಳ್ಳುವವರನ್ನು ಸೇರಿಸಿಕೊಳ್ಳತಕ್ಕದ್ದು ಮತ್ತು ಅವರ ಬೆಳವಣಿಗೆಯನ್ನು ಶ್ಲಾಘಿಸಬೇಕು.

*ಮತ್ತೊಬ್ಬ ಧೈರ್ಯದಾಯಕ.* ಇತರರ ಜೊತೆಯಲ್ಲಿ, ಯೇಸುವಿನ ಹಿಂಬಾಲಕನಾಗುವದಕ್ಕೆ ತನ್ನ ಮುಂಚಿನ ಧರ್ಮವನ್ನು ತ್ಯಜಿಸಿದ ವ್ಯಕ್ತಿಗೆ ಯೂಸ್ತನು ಒಂದು ಉದಾಹರಣೆಯಾಗಿದ್ದಾನೆ. ತನ್ನ ಯೆಹೂದಿ ಪರಂಪರೆಯನ್ನು ತೊರೆದ ಬಳಿಕ, ಆತನು ಯೇಸುವಿನ ಕುರಿತು ತಿಳಿದುಕೊಳ್ಳುವಂತೆ ಬೇರೆಯವರಿಗೆ ಸಹಾಯ ಮಾಡುವವನಾಗಿ ಕಾಣಿಸಿದನು. ಆತನು ಮತ್ತು ಇತರರು ತಮ್ಮ ಧರ್ಮವನ್ನು ಬದಲಾಯಿಸಿಕೊಂಡದ್ದು ಮಾತ್ರವಲ್ಲದೆ, ಅವರು ಕರ್ತನ ಒಬ್ಬ ಗಮನಾರ್ಹ ಸೇವಕನಾದ ಪೌಲನಿಗೆ ಪ್ರೋತ್ಸಾಹವನ್ನು ಸಹ ಮಾಡಿದರು.

*ಅಚಲನಾದ ದಾಸನು.* ಎಪಫ್ರನನ್ನು ಒಬ್ಬ "ತಂಡದ ಕೆಲಸಗಾರ" ಎಂದು ಕರೆಯಬಹುದು. ತನಗೋಸ್ಕರವಲ್ಲದೆ ಬೇರೆಯವರಿಗೋಸ್ಕರ ಕೆಲಸ ಮಾಡಿದ ವ್ಯಕ್ತಿಗೆ ಇವನೊಬ್ಬ ಉತ್ತಮ ಉದಾಹರಣೆಯಾಗಿರುತ್ತಾನೆ. ಪೌಲನು ಆತನ ವಿಷಯದಲ್ಲಿ ಈ ಕೆಳಗಿನವುಗಳನ್ನು ತಿಳಿಯ ಪಡಿಸುತ್ತಾನೆ:

1. ಆತನು ಯೇಸುವಿನ ಜೀತದಾಳು, ಅಥವಾ ದಾಸನ ಹಾಗೆ ಸೇವೆ ಮಾಡಿದನು (1:7; 4:12). ನಾವು ನಮ್ಮ ಸ್ವಂತ ಸೊತ್ತಲ್ಲ, ಯಾಕೆಂದರೆ ನಾವು ಯೇಸುವಿನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟಿದ್ದೇವೆ (ಅಪೊಸ್ತಲರ ಕೃತ್ಯಗಳು 20:28; 1 ಕೊರಿಂಥ 6:19, 20). ಈ ಕಾರಣದಿಂದ, ನಾವು ಮಾಡುವ ಎಲ್ಲಾ ಕಾರ್ಯಗಳಲ್ಲಿ ಆತನ ಚಿತ್ತವನ್ನು ಹುಡುಕಬೇಕು. ನಂಬಿಗಸ್ತರಾಗಿ ಸೇವೆ ಮಾಡುವದು ಅಗತ್ಯವಿರುತ್ತದೆ. ಸರಿಯಾದದ್ದನ್ನು ಮಾತಾಡುವದು ಪ್ರಾಮುಖ್ಯವಾದದ್ದು, ಆದರೆ ಸರಿಯಾದದ್ದನ್ನು ಮಾಡುವದು ಅಗತ್ಯವಿರುತ್ತದೆ (ಮತ್ತಾಯ 7:21; ಲೂಕ 6:46).

2. ಆತನು ಬೇರೆಯವರಿಗೋಸ್ಕರ ಅತ್ಯಾಸಕ್ತಿಯಿಂದ ಪರಿಶ್ರಮ ಪಟ್ಟನು. ಸ್ವಾರ್ಥ ರಹಿತ ಸೇವೆಗೆ ಯೇಸುವೇ ಅಂತಿಮವಾದ ಉದಾಹರಣೆಯಾಗಿದ್ದಾನೆ. ಆತನು ತನ್ನ

ಸಂತೋಷಪಡಿಸಿಕೊಳ್ಳಲು ನೋಡಲಿಲ್ಲ, ಬದಲಾಗಿ, ಆತನು ಬೇರೆಯವರ ಸೇವೆ ಮಾಡುವದಕ್ಕೆ ಅಪೇಕ್ಷಿಸಿದನು (ರೋಮಾ 15:3). ಆತನು ವಿಶ್ವದ ಒಡೆಯನಾಗಿದ್ದಾಗ್ಯೂ, ಆತನು ತನ್ನನ್ನು ತಗ್ಗಿಸಿಕೊಂಡು ಸೇವಕ ರೂಪವನ್ನು ಧರಿಸಿಕೊಂಡನು (ಮತ್ತಾಯ 20:25-28; ಫಿಲಿಪ್ಪಿ 2:7). ಕ್ರೈಸ್ತರು ಸಹ ಅದೇ ರೀತಿಯಲ್ಲಿ ಸೇವೆ ಮಾಡುವದನ್ನು ಕಲಿತುಕೊಳ್ಳಬೇಕು.

3. ಆತನು ಬೇರೆಯವರಿಗಾಗಿ ಕಾಳಜಿ ಹೊಂದಿದ್ದನು. ಎಪಫ್ರನು ಕೊಲೊಸ್ಸೆಯವರಿಗಾಗಿ ಮಾಡಿದ ಸೇವೆಯು ಅವರ ಮೇಲೆ ಆತನಿಗಿದ್ದ ಹಿತಾಸಕ್ತಿಯಿಂದಲೇ ಉಂಟಾದದ್ದಾಗಿತ್ತು. ಹೃದಯಪೂರ್ವಕವಾದ ಸೇವೆಯನ್ನು ಒದಗಿಸುವ ಮುಂಚೆ, ಸೇವೆ ಮಾಡುವವರ ಹೃದಯಗಳನ್ನು ಒಂದು ಸ್ವಾಭಾವಿಕವಾದ ಕಳಕಳಿಯು ಇರತಕ್ಕದ್ದು. ಪೌಲನ ಜೊತೆಗೆಲಸದವರು ಬೇರೆ ಬೇರೆ ಸಭೆಗಳಿಗೋಸ್ಕರ ವಿಶೇಷ ಆಸಕ್ತಿಯನ್ನು ವಹಿಸಿಕೊಂಡಿದ್ದರೆಂದು ತೋರುತ್ತದೆ. ಎಪಫ್ರನ ಮುಖ್ಯ ಕಳಕಳಿಯು ಕೊಲೊಸ್ಸೆಯಲ್ಲಿದ್ದ ಸಭೆಯ ಕುರಿತಾಗಿತ್ತು, ಬಹುಶಃ ಅದಕ್ಕೆ ಕಾರಣವು ಆತನು ಸಭೆಯನ್ನು ಸ್ಥಾಪಿಸುವದಕ್ಕೆ ಸಹಾಯ ಮಾಡಿದ್ದನು ಮತ್ತು ಸಹೋದರರ ಮಧ್ಯದಲ್ಲಿ ಕೆಲಸ ಮಾಡಿದ್ದನೆಂಬುದೆ ಆಗಿರಬೇಕು.

4. ಆತನು ಬೇರೆಯವರಿಗಾಗಿ ಪ್ರಾಮಾಣಿಕವಾಗಿ ಪ್ರಾರ್ಥಿಸಿದನು. ಎಪಫ್ರನು ಕೊಲೊಸ್ಸೆಯವರ ಜೊತೆಯಲ್ಲಿರಲಿಲ್ಲ, ಆದರೆ ಅವರಿಗೆ ಸಹಾಯ ಮಾಡುವದಕ್ಕೆ ಸಾದ್ಯವಾದದ್ದನ್ನೆಲ್ಲಾ ಮಾಡಿದನು. ಅದರಲ್ಲೂ ವಿಶೇಷವಾಗಿ, ಆತನು ಅವರಿಗೋಸ್ಕರ ಪ್ರಾರ್ಥನೆ ಮಾಡಿದನು. ವಿಶ್ವಾಸಿಗಳು ಒಬ್ಬರಿಗೊಬ್ಬರು ಪ್ರಾರ್ಥಿಸಿಕೊಳ್ಳಬೇಕು. ಕೆಲವು ಸಂದರ್ಭಗಳಲ್ಲಿ, ನಾವು ಪ್ರೀತಿಸುವವರಿಗೆ ಸಹಾಯ ಮಾಡುವದಕ್ಕೆ ಇದೇ ಉತ್ತಮ ದಾರಿಯಾಗಿರಬಲ್ಲದು.

*ವಿರುದ್ಧ ಹೋಲಿಕೆಯುಳ್ಳ ಸಹೋದರರು.* ಲೂಕನ ಜೀವಿತವನ್ನು ದೇಮನ ಜೀವಿತದೊಂದಿಗೆ ವಿರುದ್ಧ ಹೋಲಿಕೆ ಮಾಡಬಹುದಾಗಿದೆ. ಲೂಕನು ಯೇಸುವಿಗೂ ಪೌಲನಿಗೂ ನಿಷ್ಠೆಯಿಂದ ಉಳಿದರೆ, ದೇಮನು ಇಹಲೋಕದ ಮೇಲಿನ ಪ್ರೀತಿಯ ಕಾರಣದಿಂದ ದಾರಿ ಬಿಟ್ಟು ಹೋದನು (2 ತಿಮೊಥೆ 4:10, 11). ಮಾನವ ಜೀವಿಗಳು ಸ್ವತಂತ್ರ ಪ್ರತಿನಿಧಿಗಳು; ದೇವರು ನಮಗೆ ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ. ಯೇಸುವಿನ ಅತ್ಯಂಥ ಮಹಾನ್ ಸೇವಕರಲ್ಲೊಬ್ಬನಾಗಿದ್ದಂಥ ಪೌಲನ ಜೊತೆಯಲ್ಲಿ ಕೆಲಸ ಮಾಡಿದ ಬಳಿಕವೂ, ದೇಮನು ಅಪನಂಬಿಗಸ್ತನಾದನು. ಅದೇ ರೀತಿಯಲ್ಲಿಯೇ, ಯೂದನು ಯೇಸುವನ್ನು ತೊರೆದು ಹೋದನು. ಪ್ರತಿಯೊಬ್ಬ ಕ್ರೈಸ್ತನು ಸಹ ಪೌಲನ ಎಚ್ಚರಿಕೆಗೆ ಕಿವಿಗೊಡಬೇಕು: “ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ” (1 ಕೊರಿಂಥ 10:12).

ಲೋಕದ ಮೇಲಿನ ಪ್ರೀತಿಯೊಳಗೆ ಹಣದ ಪ್ರೀತಿ, ಸ್ವಾರ್ಥ ಪ್ರೀತಿ, ಮತ್ತು ಭೋಗಗಳ ಪ್ರೀತಿಗಳು ಸೇರಿರಬಲ್ಲವು (1 ತಿಮೊಥೆ 6:10; 2 ತಿಮೊಥೆ 3:2, 4). ಈ ಅಪಾಯಗಳನ್ನು 1 ಯೋಹಾನ 2:15, 16ರಲ್ಲಿ ಸಾರಾಂಶಗೊಳಿಸಲಾಗಿರುತ್ತದೆ:

> ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ.

ಲೋಕದಲ್ಲಿರುವ ಶರೀರದಾಶೆ ಕಣ್ಣಿನಾಶೆ ಬದುಕುಬಾಳಿನ ಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ.

## **"ಸೇವೆಯನ್ನು ನೆರವೇರಿಸುವದಕ್ಕೆ ಎಚ್ಚರವಾಗಿರು" (4:15-18)**

ಪೌಲನ ವೈಯಕ್ತಿಕ ವಂದನೆಯಲ್ಲಿ, ಈ ಪತ್ರಿಕೆಯು ಲವೊದಿಕೀಯ ಸಭೆಯಲ್ಲಿ ಓದಿಸಲ್ಪಡಬೇಕೆಂದು ಬೇಡಿಕೊಂಡನು. ಆತನು ಪ್ರತ್ಯೇಕವಾಗಿ ಅರ್ಖಿಪ್ಪನನ್ನು ಹೆಸರಿಸಿ ಆತನು ಹೊಂದಿದ್ದ ಸೇವೆಯನ್ನು ನೆರವೇರಿಸಬೇಕೆಂದು ಪ್ರೋತ್ಸಾಹಿಸುತ್ತಾನೆ.

*ಸಭೆಗಾಗಿ ಕಳಕಳಿ.* ಪೌಲನು ಕ್ರಿಸ್ತನ ಸಭೆಗಳ ವಿಷಯದಲ್ಲಿ, ಆತನು ಭೇಟಿಯನ್ನೇ ಕೊಟ್ಟಿರದ ಸಭೆಗಳ ವಿಷಯದಲ್ಲಿ ಸಹ ಒಂದು ವಿಶ್ವವ್ಯಾಪಿ ಆಸಕ್ತಿಯನ್ನು ಹೊಂದಿದ್ದನು. ಇದು ಕೊಲೊಸ್ಸೆಯವರಿಗೆ ಹೇಳಿದ ಬೀಳ್ಕೊಡುಗೆಯ ವಂದನೆಗಳಲ್ಲಿ ಹಾಗೂ ಪತ್ರಿಕೆಯಲ್ಲಿ ಮುಂಚೆ ನೀಡಿದ ಹೇಳಿಕೆಯಲ್ಲಿ ಸ್ಪುಟವಾಗಿರುತ್ತದೆ: "ನಿಮಗೋಸ್ಕರವೂ ಲವೊದಿಕೀಯದವರಿಗೋಸ್ಕರವೂ ನನ್ನನ್ನು ಕಣ್ಣಾರೆ ಕಾಣದಿರುವವರೆಲ್ಲರಿಗೋಸ್ಕರವೂ ನನಗೆ ಬಹಳ ಹೋರಾಟ ಉಂಟೆಂಬದು ನಿಮಗೆ ತಿಳಿದಿರಬೇಕೆಂದು ಅಪೇಕ್ಷಿಸುತ್ತೇನೆ" (2:1). ಕೊರಿಂಥದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ, ತಾನು ಎದುರಿಸಿದ ಶಾರೀರಿಕ ಸಂಕಷ್ಟಗಳನ್ನು ಹೆಸರಿಸಿದ ಬಳಿಕ, ಆತನು ಮುಂದುವರೆದು ಹೀಗೆ ಹೇಳುತ್ತಾನೆ, "ಇನ್ನೂ ಬೇರೆ ಸಂಗತಿಗಳಲ್ಲದೆ ಎಲ್ಲಾ ಸಭೆಗಳ ವಿಷಯವಾದ ಚಿಂತೆಯು ನನ್ನನ್ನು ಪೀಡಿಸುತ್ತದೆ" (2 ಕೊರಿಂಥ 11:28).

ಕ್ರಿಸ್ತನ ದೇಹದೊಳಗೆ ನಾವು ಅದೇ ರೀತಿಯ ಕಳಕಳಿ ಹಾಗೂ ಆಸಕ್ತಿಯನ್ನು ಹೊಂದಿರಬೇಕು. ನಾವು ಸ್ಥಳೀಯ ಕ್ರೈಸ್ತ ಕುಟುಂಬವೊಂದರ ಭಾಗವಾಗಿರುವದು ಮಾತ್ರವಲ್ಲದೆ, ನಾವು ಒಂದು ಬೃಹತ್ ಅನ್ಯೋನ್ಯತೆಯಲ್ಲಿ ಸಹ ಸದಸ್ಯರಾಗಿದ್ದೇವೆ, ಅದು ಒಂದೇ ದೇಹವಾಗಿದ್ದು ಯೇಸುವು ಅದಕ್ಕೆ ಶಿರಸ್ಸಾಗಿದ್ದಾನೆ. ನಾವು ಈ ಭೂಮಿಯ ಮೇಲೆ ದೇವರ ಕುಟುಂಬದ ಸದಸ್ಯರಾಗಿದ್ದೇವೆ ಮತ್ತು ನಾವೆಲ್ಲರೂ ದೇವರ ಪರಲೋಕದ ಕುಟುಂಬವಾಗಿ ಪರಲೋಕದಲ್ಲಿ ಪರಲೋಕದ ಸಮೂಹಗಳೊಂದಿಗಿರುವೆವು (ಎಫೆಸ 3:15; ಬೇರೆ ಕಡೆಯಲ್ಲಿ ಲೂಕ 2:4; ಅಪೊಸ್ತಲರ ಕೃತ್ಯಗಳು 3:25ರಲ್ಲಿ ಮಾತ್ರವೇ). ಈ ಕಾರಣಕ್ಕಾಗಿ ನಾವು ಎಲ್ಲೆಡೆಯೂ ಇರುವ ಕ್ರೈಸ್ತರೆಲ್ಲರಿಗೋಸ್ಕರ ಪ್ರಾರ್ಥಿಸತಕ್ಕದ್ದು.

ಸ್ಥಳೀಯ ಸಭೆಯಲ್ಲಿ ನಮ್ಮ ಅತಿ ಹೆಚ್ಚಾದ ನಿಷ್ಠೆ ಮತ್ತು ಭಕ್ತಿಯನ್ನು ತೋರಿಸುವೆವು, ಆದರೆ ನಾವು ಕ್ರಿಸ್ತನ ಎಲ್ಲಾ ಜನರಲ್ಲಿ ಆಸಕ್ತಿಯನ್ನು ವಹಿಸಬೇಕು. ಬೇರೆ ಸ್ಥಳಗಳಲ್ಲಿರುವ ಸಭೆಗಳೆಲ್ಲಾ ರೋಮಾಪುರದಲ್ಲಿನ ಸಭೆಯನ್ನು ತಿಳಿದವುಗಳಾಗಿದ್ದವು ಮತ್ತು ವಂದನೆ ಹೇಳುತ್ತವೆ ಎಂಬುದನ್ನು ಪೌಲನು ತೋರಿಸಿದನು (ರೋಮಾ 16:16). ಆದಿ ಕ್ರೈಸ್ತರು ಕ್ರಿಸ್ತನ ಇಡೀ ದೇಹಕ್ಕಾಗಿ ಹೊಂದಿದ್ದ ಕಳಕಳಿಯ ಮಾದರಿಯನ್ನು ನಾವು ಅನುಸರಿಸುವರಿಂದ ಉತ್ತಮತೆಯನ್ನು ಸಾಧಿಸುತ್ತೇವೆ.

*ವಾಕ್ಯದ ಅಧಿಕಾರಕ್ಕೆ ಗೌರವ ಕೊಡುವದು.* ಪೌಲನ ಪತ್ರಿಕೆಗಳು ಮೊದಲ ಶತಮಾನದಲ್ಲಿ ಕ್ರಿಸ್ತನ ಸಭೆಗಳಿಗೆ ಮಹತ್ವಪೂರ್ಣವಾಗಿದ್ದವು ಮತ್ತು ಇಂದು ನಮಗೆ ಸಹ ಅದೇ ಅಧಿಕಾರದ ಮಹತ್ವವನ್ನು ಹೊಂದಿರತಕ್ಕದ್ದು. ಅವುಗಳು ಬೇರೆ ಸಭೆಗಳಲ್ಲಿ ಸಹ ಓದಲ್ಪಡಬೇಕೆಂದು ಆತನು ಬೇಡಿಕೊಳ್ಳುವದು ತೋರಿಸುವದೇನೆಂದರೆ ಆತನು ಅವುಗಳ ಪ್ರಾಮುಖ್ಯತೆಯನ್ನು ಗ್ರಹಿಸಿಕೊಂಡಿದ್ದನು.

ಆತನು ಮನುಷ್ಯರಿಂದ ತನ್ನ ಸಂದೇಶವನ್ನು ಪಡೆದಿರಲಿಲ್ಲ, ಆದರೆ ಯೇಸುವಿನಿಂದಲೇ ಪಡೆದಿದ್ದನು (ಗಲಾತ್ಯ 1:11, 12). ಯೇಸುವಿನಿಂದ ಪವಿತ್ರಾತ್ಮನ ಮೂಲಕವಾಗಿ ಪ್ರಕಟಗೊಳಿಸಲ್ಪಟ್ಟಿದ್ದ ಆತನ ಪತ್ರಿಕೆಗಳು ಓದಲ್ಪಡಬೇಕು ಮತ್ತು ಅರ್ಥಮಾಡಿಕೊಳ್ಳಲ್ಪಡಬೇಕು (2 ಕೊರಿಂಥ 1:13; ಎಫೆಸ 3:3-5). ಅವುಗಳನ್ನು ಮನುಷ್ಯರ ಅಥವಾ ಪೌಲನ ಯೋಚನೆ ಎಂಬುದಕ್ಕಿಂತಲೂ ಅಧಿಕವಾದವುಗಳೆಂದು ಗುರುತಿಸತಕ್ಕದ್ದು; ಅವುಗಳನ್ನು ಕ್ರಿಸ್ತನ ವಿಧಿಗಳೆಂದು ಅಂಗೀಕರಿಸಿಕೊಳ್ಳತಕ್ಕದ್ದು (1 ಕೊರಿಂಥ 14:37).

ಪೌಲನ ಪತ್ರಿಕೆಗಳು ಆತನಿಗೆ ದಯಪಾಲಿಸಲಾಗಿದ್ದ ಜ್ಞಾನದ ಫಲಿತವಾಗಿರುತ್ತವೆಂಬದನ್ನು ಪೇತ್ರನು ಗುರುತಿಸಿದ್ದನು. ಆತನು ಅವುಗಳ ಮೇಲೆ ದೇವರಿಂದ ಕೊಡಲ್ಪಟ್ಟಿರುವ ಶಾಸ್ತ್ರಗಳೆಂದು, ಅಧಿಕಾರದಲ್ಲಿ ಮಿಕ್ಕ ಎಲ್ಲಾ ಶಾಸ್ತ್ರಗಳಿಗೆ ಸಮಾನತೆಯಲ್ಲಿರುವವುಗಳೆಂದು ತನ್ನ ಅನುಮೋದನೆಯ ಮುದ್ರೆಯನ್ನು ಹಾಕಿದ್ದನು (2 ಪೇತ್ರ 3:15, 16).

ನಾವು ಸಭೆಗಳಲ್ಲಿ ಪೌಲನ ಪತ್ರಿಕೆಗಳಿಗೆ ಅದೇ ಅಧಿಕಾರದ ಸ್ಥಾನವನ್ನು ಕೊಡಬೇಕು. ಕ್ರೈಸ್ತರು ಅವುಗಳನ್ನು ಓದಬೇಕು, ಅಧ್ಯಯನ ಮಾಡಬೇಕು, ಮತ್ತು ವಿಧೇಯರಾಗಬೇಕು, ಯಾಕೆಂದರೆ ಅವುಗಳು ಯೇಸುವಿನ ಆಜ್ಞೆಗಳನ್ನು ಒಳಗೊಂಡಿರುತ್ತವೆ. ನಾವು ಅವುಗಳಿಗೆ ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನನ ಸುವಾರ್ತೆಗಳಲ್ಲಿ ಬರೆಯಲ್ಪಟ್ಟಿರುವ ಯೇಸುವಿನ ಮಾತುಗಳಿಗೆ ಕೊಡುವಂಥ ಅದೇ ಗೌರವವನ್ನು ಕೊಡಬೇಕು.

*ಆತನ ಧ್ಯೇಯಕ್ಕಾಗಿ ನಮ್ಮ ಪ್ರತಿಭೆಗಳನ್ನು ಉಪಯೋಗಿಸುವದರಲ್ಲಿ ಶ್ರದ್ಧೆಯಿಂದಿರುವದು.* ಪೌಲನು ಅರ್ಖಿಪ್ಪನಿಗೆ ಆತನ ಸೇವೆಯನ್ನು ನೆರವೇರಿಸಬೇಕೆಂದು ಬೇಡಿಕೊಂಡನು. ನಮ್ಮೆಲ್ಲರಿಗೆ ಸಹ ಅದೇ ಮನವಿಯನ್ನು ಮಾಡಬಹುದಾಗಿದೆ — ಏನೆಂದರೆ ನಾವು ಯೇಸುವಿಗೆ ಮಾಡುವ ಸೇವೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂಬದೆ. ನಮ್ಮೆಲ್ಲರಿಂದಲೂ ಒಂದೇ ವಿಧದಲ್ಲಿ ಸೇವೆ ಮಾಡುವದನ್ನು ಎದುರು ನೋಡಲಾಗುವದಿಲ್ಲ ಅಥವಾ ನಾವು ಶಕ್ತರೂ ಆಗಿರುವದಿಲ್ಲ.

ಬೇರೊಂದು ಕಡೆಯಲ್ಲಿ, ಆದಿ ಕ್ರೈಸ್ತರಿಗೆ ಕೊಡಲ್ಪಟ್ಟಿರುವ ವೈಯಕ್ತಿಕ ಸಾಮರ್ಥ್ಯಗಳ ಬಗ್ಗೆ ಮಾತಾಡುತ್ತಾನೆ. "ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು" (ಎಫೆಸ 4:11). ಅಂಥ ಸೇವೆಯ ಹುದ್ದೆಗಳು ಸೇವೆಗಾಗಿ ಕ್ರೈಸ್ತರನ್ನು ಸಜ್ಜುಗೊಳ್ಳಲು ಸಹಾಯ ಮಾಡುವದಕ್ಕೆ ಮತ್ತು ಕ್ರಿಸ್ತನ ದೇಹದ ಭಕ್ತಿವೃದ್ಧಿ ಮಾಡುವದಕ್ಕೆ ನೇಮಕವಾದವರನ್ನು ಮಾತ್ರವೇ ಒಳಗೊಂಡಿರುತ್ತವೆ (ಎಫೆಸ 4:12). ಕೆಲಸಗಳು ಇಡೀ ಕ್ರಿಸ್ತನ ದೇಹವನ್ನು ಒಳಗೊಂಡಿರುವದಿಲ್ಲ.

ಎಲ್ಲರೂ ಅಪೊಸ್ತಲರಲ್ಲ, ಪ್ರವಾದಿಗಳಲ್ಲ, ಅಥವಾ ಉಪದೇಶಕರಲ್ಲ (1 ಕೊರಿಂಥ 12:29). ಅಪೊಸ್ತಲರು ಸಭೆಯ ಅಸ್ತಿವಾರದಲ್ಲಿದ್ದಾರೆ (ಎಫೆಸ 2:20), ಅದು ಈಗಾಗಲೇ ಹಾಕಲ್ಪಟ್ಟದ್ದಾಗಿದೆ. ಆದಿ ಸಭೆಯು ಅಪೊಸ್ತಲರ ಬೋಧನೆಗಳನ್ನು ಕೇಳುವದರಲ್ಲಿ ನಿರತವಾಗಿದ್ದ ಪ್ರಕಾರವೇ (ಅಪೊಸ್ತಲರ ಕೃತ್ಯಗಳು 2:42), ಇಂದು ನಾವು ಅದರ ಮೇಲೆ

ಕಟ್ಟಲ್ಪಡಬೇಕಿರುತ್ತದೆ. ಅವರಿಗೆ ಮಾತ್ರವೇ ಪವಿತ್ರಾತ್ಮನ ಮೂಲಕವಾಗಿ ವಾಕ್ಯವು ಕೊಡಲ್ಪಟ್ಟಿರುತ್ತದೆ (ಎಫೆಸ 3:5). ಎಲ್ಲರೂ ಬೋಧಕರಾಗಬೇಕೆಂದು ನಿರೀಕ್ಷಿಸಲಾಗಿರುವದಿಲ್ಲ (ಯಾಕೋಬ 3:1). ಒಬ್ಬ ವ್ಯಕ್ತಿಯು ಬೋಧಿಸುವದಕ್ಕೆ ಆರಂಭ ಮಾಡುವ ಮುಂಚೆ, ಆತನು ಬೋಧಿಸುವದಕ್ಕೆ ಸಿದ್ಧನಾಗಿರಬೇಕು (ಇಬ್ರಿಯ 5:12).

ಪೌಲನು ರೋಮಾಪುರದವರಿಗೆ ತಾವು ಕ್ರಿಸ್ತನಿಗೋಸ್ಕರ ಯಾವಾವ ಸೇವೆಯನ್ನು ಮಾಡುವದಕ್ಕೆ ಶಕ್ತರಾಗಿದ್ದಾರೋ ಅದರಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳುವಂತೆ ಬೇಡಿಕೊಳ್ಳುತ್ತಾನೆ.

> ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ. ಅದು ಸಭಾಸೇವೆಯ ರೂಪವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ. ಬೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿಹೇಳುವವನು ಬುದ್ಧಿಹೇಳುವದರಲ್ಲಿಯೂ ನಿರತನಾಗಿರಲಿ. ದಾನಕೊಡುವವನು ಯಥಾರ್ಥಮನಸ್ಸಿನಿಂದ ಕೊಡಲಿ. ಹಿರೀತನ ನಡಿಸುವವನು ಆಸಕ್ತಿಯಿಂದ ನಡಿಸಲಿ. ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ (ರೋಮಾ 12:6-8).

ನಾವು ನಮ್ಮ ಸೇವೆ ಸ್ಥಾನವನ್ನು ಕಂಡುಕೊಂಡು ಅದನ್ನು ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನೆರವೇರಿಸಬೇಕೆಂದು ನಮ್ಮಿಂದ ನಿರೀಕ್ಷಿಸಲಾಗುತ್ತದೆ. ಪೌಲನು ಹೀಗೆ ಬರೆದನು, "ಕ್ರೈಸ್ತ ಸಹೋದರರು ಅಣ್ಣತಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸಿರಿ. ಮಾನಮರ್ಯಾದೆಯನ್ನು ತೋರಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ. ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ" (ರೋಮಾ 12:10, 11).

ಅರ್ಖಿಪ್ಪನಿಗೆ ನೀಡಲಾದ ಸವಾಲನ್ನು ವೈಯಕ್ತಿಕವಾಗಿ ತೆಗೆದುಕೊಳ್ಳತಕ್ಕದ್ದು: "ನೀನು ಕರ್ತನಿಂದ ಹೊಂದಿರುವ ಸೇವೆಯನ್ನು ನೆರವೇರಿಸುವದಕ್ಕೆ ಎಚ್ಚರವಾಗಿರಬೇಕು" (ಕೊಲೊಸ್ಸೆ 4:17). ಇದು ಪ್ರತಿಯೊಬ್ಬ ಕ್ರೈಸ್ತನು ಸಹ ಜಾಗ್ರತೆಯಿಂದ ಪರಿಗಣಿಸಬೇಕಾಗಿರುವ ಒಂದು ಸೂಕ್ತವಾದ ಬುದ್ಧಿವಾದವಾಗಿರುತ್ತದೆ.

ಸಾರಾಂಶದಲ್ಲಿ, ನಾವು ಕ್ರಿಸ್ತನ ದೇಹದಲ್ಲಿ ಇರುವವರೆಲ್ಲರಲ್ಲಿ ಆಸಕ್ತಿಯನ್ನು ತೆಗೆದುಕೊಳ್ಳಬೇಕು ಮತ್ತು ಅವರಿಗಾಗಿ ಕಳಕಳಿಯನ್ನು ಹೊಂದಿರಬೇಕು. ಪೌಲನು ನೀಡಿದ ಅಪ್ಪಣೆಗಳಿಗೆ ಕ್ರಿಸ್ತನ ಅಧಿಕಾರದ ಬೆಂಬಲವಿರುತ್ತದೆ ಮತ್ತು ಆತನ ವಿಧಿಗಳನ್ನೊಳಗೊಂಡವುಗಳೆಂದು ಗೌರವಿಸತಕ್ಕವುಗಳಾಗಿವೆ. ನಾವೆಲ್ಲರೂ ಒಂದೇ ವಿಧವಾದ ಸೇವೆಯನ್ನು ಮಾಡಬೇಕೆಂದು ನಮ್ಮಿಂದ ನಿರೀಕ್ಷಿಸಲಾಗುವದಿಲ್ಲ, ಆದರೆ ನಾವು ಯಾವ ಕ್ಷೇತ್ರದಲ್ಲಿ ಯೇಸುವಿಗೆ ಅತ್ಯುತ್ತಮ ಸೇವೆಯನ್ನು ಮಾಡಲು ಶಕ್ತರೋ ಅದರಲ್ಲಿ ಸಕಲ ಶ್ರದ್ಧೆಯನ್ನು ಕೊಟ್ಟು ಮಾಡತಕ್ಕದ್ದು.

## ಅಡಿಟಿಪ್ಪಣಿಗಳು

[1]David M. Hay, *Colossians*, Abingdon New Testament Commentaries (Nashville: Abingdon Press, 2000), 156. [2]ಮತ್ತಾಯ 10:13, 14, 41; ಮಾರ್ಕ 6:10, 11; ಲೂಕ 9:4, 5; 10:8; ಇಬ್ರಿಯ 11:31. [3]1 ಕೊರಿಂಥ 6:9, 10; 15:50; ಗಲಾತ್ಯ 5:21; ಎಫೆಸ 5:5; ನೋಡಿರಿ 1 ಥೆಸಲೋನಿಕ 2:12. [4]ನೋಡಿರಿ ಲೂಕ 13:24; ಯೋಹಾನ 18:36; 1 ಕೊರಿಂಥ 9:25; ಕೊಲೊಸ್ಸೆ 1:29; 1 ತಿಮೊಥೆ 6:12; 2 ತಿಮೊಥೆ 4:7. [5]ನೋಡಿರಿ ರೋಮಾ 5:2; 11:20; 14:4; 1 ಕೊರಿಂಥ 7:37; 10:12; 15:1; 2 ಕೊರಿಂಥ 1:24; ಎಫೆಸ 6:11, 13, 14. [6]ರೋಮಾ 16:5, 8, 9, 12; ಎಫೆಸ 6:21; ಕೊಲೊಸ್ಸೆ 1:7; 4:7, 9; 2 ತಿಮೊಥೆ 1:2; ಫಿಲೆಮೋನನಿಗೆ 1, 2, 16. [7]ಅಪೊಸ್ತಲರ ಕೃತ್ಯಗಳು 16:10-17; 20:5-15; 21:1-18; 27:1-8, 15-20, 27-29, 37; 28:1, 2, 10-16. [8]Eusebius *Church History* 3.4; Jerome *On Illustrious Men* 3.7. [9]R. T. A. Murphy, "Luke, Evangelist, St.," in *New Catholic Encyclopedia*, 2d ed., ed. Thomas Carson and Joann Cerrito (New York: Thomas Gale, 2003), 8:856. [10]Jerome *On Illustrious Men* 5.

[11]A. F. Walls, "Apocryphal Epistles," in *The International Standard Bible Encyclopedia*, rev., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:180. [12]Marcion, ಈತನು ನಾಲ್ಕನೆಯ ಶತಮಾನದ ತನಕ ಅಸ್ತಿತ್ವದಲ್ಲಿದ್ದ ಒಂದು ಕ್ರೈಸ್ತ ಪಂಥದ ಸ್ಥಾಪಕನಾಗಿದ್ದನು, ಆತನು ಕ್ರಿ.ಶ. 144ರಲ್ಲಿ ಒಬ್ಬ ಗ್ನಾಸ್ಟಿಕ್‌ವಾದಿ ಮತ್ತು ಒಬ್ಬ ಪಾಷಂಡಿ ಎಂಬದಾಗಿ ಸಭೆಯಿಂದ ಬಹಿಷ್ಕಾರ ಹಾಕಲ್ಪಟ್ಟನು. ಆತನು ಸುವಾರ್ತೆಗಳಲ್ಲಿ ಮೂರು ಸುವಾರ್ತೆಗಳ ಪುಸ್ತಕಗಳನ್ನು ತಿರಸ್ಕರಿಸಿದ್ದು ಹೊಸ ಒಡಂಬಡಿಕೆಯ ಕ್ಯಾನೊನ್‌ನಲ್ಲಿ ಯಾವನ್ನು ಅಂಗೀಕರಿಸಬೇಕೆಂಬುದಾಗಿ ಸಭೆಗೆ ಪ್ರಚೋದನೆಯನ್ನು ನೀಡಿತ್ತು. [13]Herbert M. Carson, *The Epistles of Paul to the Colossians and Philemon: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 101–2. [14]D. E. Hiebert, "Archippus," in *The Zondervan Pictorial Encyclopedia of the Bible*, ed. Merrill C. Tenney (Grand Rapids, Mich.: Zondervan Publishing Co., 1975), 1:287. [15]Eduard Lohse, *Colossians and Philemon*, trans. William R. Poehlmann and Robert J. Karris, Hermeneia (Philadelphia: Fortress Press, 1971), 175, n. 50. [16]ರೋಮಾ 1:7; 16:20, 24; 1 ಕೊರಿಂಥ 1:2; 16:23; 2 ಕೊರಿಂಥ 1:2; 13:14; ಗಲಾತ್ಯ 1:3; 6:18; ಎಫೆಸ 1:2; 6:24; ಫಿಲಿಪ್ಪಿ 1:2; 4:23; ಕೊಲೊಸ್ಸೆ 1:2; 4:18; 1 ಥೆಸಲೋನಿಕ 1:1; 5:28; 2 ಥೆಸಲೋನಿಕ 1:2; 3:18; 1 ತಿಮೊಥೆ 1:2; 6:21; 2 ತಿಮೊಥೆ 1:2; 4:22; ತೀತನಿಗೆ 1:4; 3:15; ಫಿಲೆಮೋನನಿಗೆ 3, 25.